|| ಶ್ರೀ ಹರಿಃ ||
**ವಸುದೇವಸುತಂ(ನ್) ದೇವಂ(ಙ) ಕಂಸಚಾಣೂರಮರ್ದನಂ**
**|**
**ದೇವಕೀಪರಮಾನಂದಂ(ಙ) ಕೃಷ್ಣಂ(ಮ್) ವಂದೇ ಜಗದ್ಗುರುಮ್ ||**

# || ಶ್ರೀಮದ್ಭಗವದ್ಗೀತಾ ಅರ್ಥವಿವೇಚನೆ ಮತ್ತು ವ್ಯಾಖ್ಯಾನ ||

**ಅಧ್ಯಾಯ 11: ವಿಶ್ವರೂಪದರ್ಶನಯೋಗ**

2/4 (ಶ್ಲೋಕ 15-31), ಶನಿವಾರ, 18 ಫೆಬ್ರವರಿ 2023

**ವಿವೇಚನಕಾರರು: ಗೀತಾ ವಿಶಾರದ ಶ್ರೀ ಡಾ. ಆಶು ಗೋಯಲ್ ಜಿ**

YouTube ಲಿಂಕ್: https://youtu.be/9nKnCL9uAkY

## ಅರ್ಜುನನಿಂದ ತ್ರಿಷ್ಟುಪ್ ಛಂದಸ್ಸಿನಲ್ಲಿ ವಿಶ್ವರೂಪದ ಭಾವರಸಧಾರೆ

ಭಗವಂತನ ದಿವ್ಯ ನಾಮಸ್ಮರಣೆ ಮಾಡುತ್ತಾ ದೀಪಪ್ರಜ್ವಲನೆಯ ಸುಶ್ರಾವ್ಯ ಗೀತೆಯೊಂದಿಗೆ ದೀಪ ಬೆಳಗಿ ಇಂದಿನ ವಿವೇಚನ ಸತ್ರವನ್ನು ಪ್ರಾರಂಭ ಮಾಡಲಾಯಿತು. ಸಾಧಕರ ಪಾಲಿಗೆ ಅಮೂಲ್ಯವೆನಿಸಿಕೊಂಡಿರುವ ಮಹಾಶಿವರಾತ್ರಿಯ ಈ ಪರ್ವಕಾಲದಲ್ಲಿ ಪರಶಿವನ ಕುರಿತು ಮೊದಲು ಸ್ವಲ್ಪ ಚಿಂತನೆ ನಡೆಸೋಣ. ಭಗವದ್ಗೀತೆಯನ್ನು ಸ್ಪಷ್ಟವಾಗಿ, ಅರ್ಥಬದ್ಧವಾಗಿ ಕಲಿಯುತ್ತಿರುವ ನಾವುಗಳು ಕೂಡಾ ಸಾಧಕರ ಸಾಲಿನಲ್ಲಿ ನಿಂತಿರುತ್ತೇವೆ. ಪರಶಿವನ, ಪರಮೇಶ್ವರನ ಅಥವಾ ಭಗವಂತನ ವಿಶ್ವರೂಪವನ್ನು ನೋಡುವ ಮೊದಲು 'ಶಿವ'ನ ಬಗ್ಗೆ ತಿಳಿದುಕೊಳ್ಳೋಣ. 'ಶಿವ' ಪದದ ಅರ್ಥ 'ಕಲ್ಯಾಣ' ಎಂದು. ಲೋಕಕಲ್ಯಾಣಕ್ಕಾಗಿ ಶಂಕರನು ಶಿವನಾದನು. ಹಿಂದೂ ಪಂಚಾಂಗದ ಹನ್ನೆರಡು ಮಾಸಗಳಲ್ಲಿ ಹನ್ನೆರಡು ಶಿವರಾತ್ರಿಗಳು ಬರುತ್ತವೆ. ಅಧಿಕಮಾಸ ಬಂದಾಗ ಇನ್ನೊಂದು ಶಿವರಾತ್ರಿ ಸೇರಿ ಹದಿಮೂರು ಶಿವರಾತ್ರಿಗಳು. ಅದರಲ್ಲಿ ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಆಚರಿಸುವ ಶಿವರಾತ್ರಿ ತುಂಬಾ ವಿಶೇಷವಾದದ್ದು. ಈ ದಿನವನ್ನು ಮಹಾಶಿವರಾತ್ರಿ ಎಂದು ಕರೆಯಲಾಗಿದೆ. ಶಿವನು ಪಾರ್ವತಿಯನ್ನು ವಿವಾಹವಾದ ದಿನ ಈ ಶಿವರಾತ್ರಿಯ ದಿನ ಎಂಬ ಪ್ರತೀತಿ ಇದೆ. ಹಾಗೂ ಶಂಕರನು ಶಿವನಾಗಿ ಪರಿವರ್ತನೆಗೊಂಡು ಪೂರ್ಣತೆಯನ್ನು ಸಾಧಿಸಿದ ದಿನವೆಂದೂ ಈ ದಿನವನ್ನು ವಿಶ್ಲೇಷಣೆ ಮಾಡಲಾಗಿದೆ. ಶಿವ ಮತ್ತು ಶಂಕರ ಇಬ್ಬರೂ ಒಬ್ಬರೇ ಆದರೂ ತತ್ತ್ವಗಳು ಬೇರೆ ಬೇರೆ. ಸಾಕಾರ ರೂಪನಾದ, ಕೈಯಲ್ಲಿ ಡಮರು, ಕೊರಳಿನಲ್ಲಿ ಹಾವು, ತಲೆಯಲ್ಲಿ ಗಂಗೆಯನ್ನು ಹೊತ್ತ ಪರಮೇಶ್ವರನನ್ನು ಶಂಕರ ಎಂದು ಕರೆಯುತ್ತೇವೆ.

**ಕರ್ಪೂರಗೌರಂ ಕರುಣಾವತಾರಂ**
**ಸಂಸಾರಸಾರಂ ಭುಜಗೇಂದ್ರಹಾರಂ ।**
**ಸದಾವಸಂತಂ ಹೃದಯಾರವಿಂದೇ**
**ಭವಂ ಭವಾನೀಸಹಿತಂ ನಮಾಮಿ ||**

ಈ ಶಂಕರನ ನಿರಾಕಾರ ತತ್ತ್ವವನ್ನು ಶಿವ ಎಂದು ಕರೆಯುತ್ತೇವೆ. ತನ್ನ ಎಲ್ಲಾ ಇಂದ್ರಿಯಗಳನ್ನೂ ಒಳಗೆ ಇರಿಸಿಕೊಂಡು 'ಪಿಂಡ' ರೂಪದಲ್ಲಿ ಶಿವಾಲಯಗಳಲ್ಲಿ ಪೂಜಿಸಲ್ಪಡುವ ಶಂಕರನನ್ನು 'ಶಿವ' ಎಂದು ಕರೆಯಲಾಗುತ್ತದೆ. ಈ ಶಿವನನ್ನು ಪೂಜಿಸುವ ರಾತ್ರಿ 'ಶಿವರಾತ್ರಿ'. ಎಲ್ಲಿಯೂ, ಯಾವತ್ತೂ ಶಂಕರರಾತ್ರಿ ಅಥವಾ ರುದ್ರರಾತ್ರಿ ಎಂಬ ಉಲ್ಲೇಖವಿಲ್ಲ. 'ಲಿಂಗ' ಎಂದರೆ 'ಪ್ರತೀಕ' ಎಂದು ಅರ್ಥ. ಶಿವಾಲಯಗಳಲ್ಲಿ ಪೂಜಿಸಲ್ಪಡುವ

ಶಿವಲಿಂಗ ಎಂಬುದು ಶಿವನ ಪ್ರತೀಕ ಎಂದು ಅರ್ಥೈಸಿಕೊಳ್ಳಬೇಕು. ತನ್ನೆಲ್ಲ ಇಂದ್ರಿಯಗಳನ್ನೂ ನಿಗ್ರಹಿಸಿಕೊಂಡ ಶಂಕರನು, ಲಿಂಗರೂಪದಲ್ಲಿ ಪಿಂಡ ರೂಪದಲ್ಲಿ 'ಶಿವ' ಎಂದು ಪೂಜಿಸಲ್ಪಡುತಾನ್ತೆ.

ಶಂಕರನ ಪರಿವಾರವು ನಮ್ಮೆಲ್ಲರ ಪರಿವಾರದಂತೆ ಇದೆ. ಸುಂದರ ಪತ್ನಿ ಪಾರ್ವತೀದೇವಿ, ಗಣಪತಿ-ಸುಬ್ರಹ್ಮಣ್ಯ ಎಂಬ ಮಕ್ಕಳು, ಸವಾರಿಗೆ ಹೋಗಲು ವಾಹನವಾದ ನಂದಿ, ಕೈಯಲ್ಲಿ ಡಮರು, ಇವು ಶಂಕರನ ಪರಿವಾರ. ಇವರುಗಳ ಮಧ್ಯದಲ್ಲಿ ಪ್ರೀತಿ ವಿಶ್ವಾಸದಿಂದ ಹಿಡಿದು ಸಣ್ಣ ಪುಟ್ಟ ಮುನಿಸು, ಜಗಳಗಳೂ ನಡೆಯುತವ್ತೆ. ಪಾರ್ವತಿ ಸಿಟ್ಟಾಗುತಾಳ್ತೆ, ಮಕ್ಕಳು ಒಬ್ಬರ ಜೊತೆ ಒಬ್ಬರು ಜಗಳ ಮಾಡಿಕೊಳ್ಳುತಾರ್ತೆ, ಅಪ್ಪ ಮಗನ ನಡುವೆ ಕದನವಾಗುತದ್ತೆ. ಅಂದರೆ ಶಂಕರನ ಸಂಸಾರವು ನಮ್ಮೆಲ್ಲರ ಸಂಸಾರದ ಹಾಗೇ ಪ್ರಾಪಂಚಿಕ ಸಂಸಾರವಾಗಿದೆ. ಸಂಸಾರದ ಜಂಜಾಟಗಳೆಲ್ಲವೂ ಅವರ ಸಂಸಾರದಲ್ಲಿಯೂ ಕಾಣುತವ್ತೆ. ಆದರೆ ಈ ಶಂಕರನು ಶಿವನಾಗಿ ಪರಿವರ್ತನೆಗೊಂಡಾಗ, ತನ್ನೆಲ್ಲ ಇಂದ್ರಿಯಗಳನ್ನೂ ನಿಗ್ರಹಿಸಿಕೊಂಡು ಲಿಂಗರೂಪಿಯಾದಾಗ ಅವನ ಸಂಪೂರ್ಣ ಸಂಸಾರವು ಅವನ ಆರಾಧನೆಯಲ್ಲಿ ತೊಡಗಿಕೊಳ್ಳುತದ್ತೆ. ಈ ಶಿವನಿಗೆ ಎಲ್ಲವೂ ಒಂದೇ ಎಲ್ಲರೂ ಒಂದೇ. ಲಿಂಗರೂಪದಲ್ಲಿ ಸಮಾಧಿಸ್ಥನಾಗಿ ಕುಳಿತ ಶಿವನ ಎದಿರು ನಂದಿ ಮಂಡಿಯೂರಿ ಕುಳಿತಿರುತದ್ತೆ. ಶಿವನ ದೇವಾಲಯದ ಕಲ್ಪನೆ ಮಾಡಿಕೊಂಡರೆ ಇದು ನಮಗೆ ತಿಳಿಯುತದ್ತೆ. ಅಂತರ್ಮುಖಿಯಾದ ಲಿಂಗರೂಪಿ ಶಿವನ ಎದಿರು ನಂದಿ ಮಂಡಿಯೂರಿ ಕುಳಿತಿರುತದ್ತೆ. ಇನ್ನೊಂದು ಕಡೆ ಪಾರ್ವತೀದೇವಿಯು ಕೈ ಮುಗಿದು ನಿಂತಿರುತಾಳ್ತೆ. ಶಿವಾಲಯದ ಬಾಗಿಲಿನ ಬಳಿ ತ್ರಿಶೂಲ, ಡಮರುಗಳು ಇರುತವ್ತೆ. ಗಣಪತಿಯೂ ಕೈ ಮುಗಿದು ನಿಂತಿರುತಾನ್ತೆ. ಕೆಲವು ಶಿವಾಲಯಗಳಲ್ಲಿ ಹನುಮಂತನ ವಿಗ್ರಹಗಳೂ ಇರುತದ್ತೆ. ಶಿವಾಲಯಗಳಲ್ಲಿರುವ ಹನುಮಂತನು ವಿಶಿಷ್ಟ ರೂಪದಲ್ಲಿ ಇರುತಾನ್ತೆ. ಶ್ರೀರಾಮನ ದೇವಾಲಯಗಳಲ್ಲಿ ಇದ್ದ ಹಾಗೆ ಕೈ ಮುಗಿದ ಶಾಂತರೂಪಿ ಹನುಮಂತ ಇಲ್ಲಿರುವುದಿಲ್ಲ. ಶಿವಾಲಯದಲ್ಲಿ ಗದೆಯನ್ನು ಹೊತ್ತು ಯುದ್ಧಕ್ಕೆ ಸನ್ನದ್ಧನಾಗಿ ನಿಂತ, ವೀರ ಆಂಜನೇಯನ ರೂಪ ಇರುತದ್ತೆ. ಶಿವನು ಎಲ್ಲವನ್ನೂ ತ್ಯಾಗ ಮಾಡಿ, ಪ್ರಪಂಚದ ಅರಿವನ್ನು ಮರೆತು ಧ್ಯಾನಸ್ಥನಾಗಿ ಕುಳಿತಿದಾನ್ತೆ. ಆದರೆ ಅವನ ಸುತ್ತ ಅವನ ಪ್ರಪಂಚ ಅವನಿಗಾಗಿ ಕಾಯುತಿರ್ತುತದ್ತೆ. ಅವನು ಲೋಕವನ್ನು ಬಿಟ್ಟರೂ, ಲೋಕ ಅವನ ಸುತ್ತ ಇರುತದ್ತೆ. ಸರ್ವವನ್ನೂ ತ್ಯಾಗ ಮಾಡಿದ ಸಾಧುಸಂತರ ಸುತ್ತ ಪ್ರಪಂಚ ಸುತುತ್ತಿರ್ತುತದ್ತೆ. ಸರ್ವವನ್ನೂ ನಿಗ್ರಹಿಸಿಕೊಂಡ ಶಂಕರನು ಶಿವನಾದರೂ ಅವನ ಸುತ್ತ ಜಗತ್ತು ನಿಂತಿರುತದ್ತೆ.

ಶಿವರಾತ್ರಿಯ ಈ ಪರ್ವಕಾಲವು ಸಾಧಕನ ಸಾಧನೆಯಿಂದ ಶಿವ ತತ್ತ್ವವನ್ನು ಹೊಂದುವ ವಿಶೇಷ ಪರ್ವವಾಗಿದೆ. ಮನುಷ್ಯನು ತನ್ನ ನಿರಂತರ ಸಾಧನೆಯಿಂದ ಶಂಕರ ತತ್ತ್ವದಿಂದ ಶಿವ ತತ್ತ್ವದೆಡೆಗೆ ಪ್ರಯಾಣ ಮಾಡಬೇಕು ಎಂಬುದು ಕೂಡಾ ಈ ಶಿವರಾತ್ರಿ ಆಚರಣೆಯ ಮೂಲ ಉದ್ದೇಶವೂ ಆಗಿದೆ. ಶಿವನು ಕಲ್ಯಾಣಕಾರಕನು. ಲೋಕ ಕಲ್ಯಾಣಕ್ಕಾಗಿ ವಿಷವನ್ನೇ ಕುಡಿದವನು. ಸ್ವಾಮಿ ರೂಪಿಯಾದ ಶಿವನು ಅಚಲನೂ, ಸತ್ಯನೂ, ಸುಂದರನೂ ಆಗಿದಾನ್ತೆ. 'ಸತ್ಯಂ ಶಿವಂ ಸುಂದರಂ' ಎಂದು ಉಪನಿಷತುಗ್ತಳು ಹೇಳುತವ್ತೆ. ಪ್ರತಿಯೊಬ್ಬ ಮನುಷ್ಯನೂ ಶಿವ ತತ್ತ್ವವನ್ನು ರೂಢಿಸಿಕೊಳ್ಳುವ ನಿಟ್ಟಿನಲ್ಲಿ ಸಾಧನೆಯಲ್ಲಿ ತೊಡಗಿಸಿಕೊಳ್ಳಬೇಕು. ಶಿವ ತತ್ತ್ವದ ಜಾಗೃತಿಯಿಂದ ಈ ಸೃಷ್ಟಿಯ ಕಲ್ಯಾಣವಾಗುತದ್ತೆ.

ಒಂದು ಸುಂದರ ಶಿವ ಭಜನೆಯನ್ನು ನೋಡೋಣ :
https://drive.google.com/file/d/1G82neRleKYp2K0NI5XhcavU-Oshb8Kuv/view?usp=drivesdk

ಶಿವರಾತ್ರಿಯು ಕರ್ಮ ಸಾಧಕರಿಗೆ ವಿಶೇಷವಾದ ರಾತ್ರಿಯಾಗಿದೆ. ಶಿವಾಲಯಗಳಲ್ಲಿ ಇಂದು ರಾತ್ರಿಯಿಡೀ ಜಪ, ತಪ, ಅಭಿಷೇಕಗಳು ನಡೆಯುತವ್ತೆ.

ಸಂಜಯನು ತನ್ನ ದಿವ್ಯದೃಷ್ಟಿಯಿಂದ ಭಗವಂತನ ವಿಶ್ವರೂಪವನ್ನು ಕಣ್ತುಂಬಿಸಿಕೊಂಡನು. ಆ ಸಮಯದಲ್ಲಿ ಭಗವಂತನ ಪಕ್ಕದಲ್ಲಿಯೇ ಇದ್ದ ಅರ್ಜುನನ ಪರಿಸ್ಥಿತಿಯನ್ನು ಸಂಜಯನು ಧೃತರಾಷ್ಟ್ರನಿಗೆ ವಿವರಿಸಿದನು. ಭಗವಂತನಿಂದ ದಿವ್ಯದೃಷ್ಟಿಯನ್ನು ಪಡೆದ ಅರ್ಜುನನು ದಿಗ್ಭ್ರಮೆಗೊಂಡು ಭಾವೋದ್ರೇಕನಾಗಿ ಕೈ ಮುಗಿದು ಭಗವಂತನನ್ನು ಸುತ್ತಿಸಲು ಪ್ರಾರಂಭಿಸುತಾನ್ತೆ.

**11.15**

**ಅರ್ಜುನ ಉವಾಚ**
**ಪಶ್ಯಾಮಿ ದೇವಾಂಸ್ತವ ದೇವ ದೇಹೇ,**
**ಸರ್ವಾಂಸ್ತಥಾ ಭೂತವಿಶೇಷಸಂಘಾನ್**
**ಬ್ರಹ್ಮಾಣಮೀಶಂ(ಙ್) ಕಮಲಾಸನಸ್ಥಮ್,**
**ಋಷೀಂಶ್ಚ ಸರ್ವಾನುರಗಾಂಶ್ಚ ದಿವ್ಯಾನ್ ॥15॥**

ಹೇ ದೇವ! ನಿನ್ನ ಶರೀರದಲ್ಲಿ ಎಲ್ಲಾ ದೇವತೆಗಳನ್ನೂ ಹಾಗು ಅನೇಕ ಜೀವ ಸಮುದಾಯಗಳನ್ನೂ ಕಮಲಾಸನದಲ್ಲಿ ಕುಳಿತಿರುವ ಬ್ರಹ್ಮನನ್ನೂ ಮಹಾದೇವನನ್ನೂ ಮತ್ತು ಎಲ್ಲಾ ಋಷಿಗಳನ್ನೂ ಹಾಗು ದಿವ್ಯವಾದ ಸರ್ಪಗಳನ್ನೂ ನೋಡುತಿದ್ದೇನೆ.

ದೇವಾನುದೇವತೆಗಳನ್ನೂ ಕಮಲದ ಮೇಲೆ ಕುಳಿತ ಬ್ರಹ್ಮನನ್ನೂ , ಮಹರ್ಷಿಗಳನ್ನೂ ಶಿವನನ್ನು ಮತ್ತು ದಿವ್ಯ ಸರ್ಪಗಳನ್ನೂ ಈ ಸ್ವರೂಪದಲ್ಲಿ ನೋಡುತಿದ್ದೇನೆ ಎಂದು ಅರ್ಜುನನು ಹೇಳುತಾನ್ತೆ.

ಅರ್ಜುನನಿಗೆ ಮತ್ತು ಸಾಮಾನ್ಯ ಮನುಷ್ಯರಿಗೆ ವ್ಯತ್ಯಾಸವಿದೆ. ಅರ್ಜುನನು ಈ ಮೊದಲು ಸ್ವರ್ಗ ಲೋಕಕ್ಕೆ ಹೋಗಿದ್ದವನು. ಒಂದು ವರ್ಷಗಳ ಕಾಲ ಅಲ್ಲಿ ವಾಸವಿದ್ದು ದೇವತೆಗಳಿಂದ ದಿವ್ಯಾಸ್ತ್ರಗಳನ್ನೂ ಪ್ರಾಪ್ತಿಸಿಕೊಂಡು ಬಂದವನು. ಅವನಿಗೆ ಸ್ವತಃ ಸ್ವರ್ಗ ಲೋಕದ ಅನುಭವ ಇದೆ. ದೇವಾನುದೇವತೆಗಳನ್ನು ಅವನು ಕಣ್ಣಾರೆ ಕಂಡು ಬಂದಿದ್ದಾನೆ. ಈಗ ಇಲ್ಲಿ ಭಗವಂತನ ವಿಶ್ವರೂಪದಲ್ಲಿ ದೇವಲೋಕ, ಬ್ರಹ್ಮಲೋಕ, ವೈಕುಂಠ, ಕೈಲಾಸ ಎಲ್ಲವೂ ಒಂದೇ ಕಡೆ ಅರ್ಜುನನಿಗೆ ಕಾಣುತಿದ್ದೆ.

ವೇದಾಂತದಲ್ಲಿ ಸಮಷ್ಟಿ ಮತ್ತು ವ್ಯಷ್ಟಿ ಬ್ರಹ್ಮದ ಉಲ್ಲೇಖ ಬರುತದ್ತೆ. ವ್ಯಷ್ಟಿ ಬ್ರಹ್ಮ ಎಂದರೆ ಮನುಷ್ಯ ಜೀವಿಯಲ್ಲಿ ಇರುವ ಬ್ರಹ್ಮ. ವ್ಯಷ್ಟಿ ಬ್ರಹ್ಮ, ವ್ಯಷ್ಟಿ ವಿಷ್ಣು ಮತ್ತು ವ್ಯಷ್ಟಿ ಶಿವ ಎಂದು ಮೂರು ವ್ಯಷ್ಟಿಗಳಿವೆ. ಮನುಷ್ಯನು ಒಂದು ಜೀವಿಯನ್ನು ಹುಟ್ಟಿಸುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಆಮೇಲೆ ಆ ಹುಟ್ಟಿಸಿದ ಜೀವಿಯ ಪಾಲನೆ ಪೋಷಣೆ ಮಾಡುತಾನ್ತೆ. ಹುಟ್ಟಿಸುವ ಬ್ರಹ್ಮ, ಪಾಲನೆ ಪೋಷಣೆ ಮಾಡುವ ವಿಷ್ಣು ಮನುಷ್ಯನ ಸಾಮರ್ಥ್ಯ.

ನಾವು ಮಗುವನ್ನು ಪಡೆದೆವು ಎನ್ನುತ್ತೇವೆ. ಆ ಮಗುವನ್ನು ಸಾಕಿ ಸಲಹುವುದು ಕೂಡಾ ನಮ್ಮದೇ ಜವಾಬ್ದಾರಿ. ಆದರೆ ನಾವು ಆ ಮಗುವಿನ ವಿನಾಶಕ್ಕೆ ಜವಾಬ್ದಾರರಾಗುವುದಿಲ್ಲ. ಹುಟ್ಟಿಸುವುದಕ್ಕೆ, ಸಾಕಿ ಸಲಹುವುದಕ್ಕೆ ನಮ್ಮನ್ನು ಜವಾಬ್ದಾರರನ್ನಾಗಿ ಮಾಡುವ ನಾವು, ಯಾವ ರೀತಿಯ ನಾಶಕ್ಕೂ ನಮ್ಮನ್ನು ಜವಾಬ್ದಾರರನ್ನಾಗಿ ಮಾಡಿಕೊಳ್ಳಲು ಬಯಸುವುದಿಲ್ಲ. ಬ್ರಹ್ಮ ನಾನು, ವಿಷ್ಣು ನಾನು, ಆದರೆ ಲಯಕಾರಕನಾದ ಶಿವನಾಗಲು ಯಾರೂ ತಯಾರಿಲ್ಲ. ಯಾವುದೇ ಬಗೆಯ ನಷ್ಟಕ್ಕೂ, ನಾಶಕ್ಕೂ ನಾವು ಕಾರಣರಾಗಲು ಬಯಸುವುದಿಲ್ಲ. 'ಶಿವ'ನಾಗುವುದು ಯಾರಿಗೂ ರುಚಿಸದ ವಿಷಯ. ಶಿವತ್ವವನ್ನು ಧರಿಸಲು ಯಾರೂ ತಯಾರಿರುವುದಿಲ್ಲ. ಸಕಲ ದುಃಖಗಳಿಗೂ ಇದುವೇ ಕಾರಣ. ನಮ್ಮ ಮನಸ್ಸನ್ನು ಎಲ್ಲದಕ್ಕೂ ತಯಾರು ಮಾಡಬೇಕು. 'ಚಿದಾಕಾಶ'ವೆಂಬ ನಮ್ಮ ಚಿತದ್ತ ಆಕಾಶದಲ್ಲಿ ಬ್ರಹ್ಮ, ವಿಷ್ಣು ಬಂದರೆ ಶಿವನನ್ನೂ ಬರ ಮಾಡಿಕೊಳ್ಳಬೇಕು. ಇಲ್ಲವೇ ಯಾವುದಕ್ಕೂ ನಾವು ಜವಾಬ್ದಾರರಲ್ಲ ಎಂಬ ಭಾವವನ್ನು ಚಿತದ್ತಲ್ಲಿ ತುಂಬಿಸಿಕೊಳ್ಳಬೇಕು. ಆಗ ಸಂತುಷ್ಟಿಯಿಂದ, ಸಂತೃಪ್ತಿಯಿಂದ ದುಃಖರಹಿತವಾದ ಜೀವನವನ್ನು ಜೀವಿಸಲು ಸಾಧ್ಯ.

**11.16**

**ಅನೇಕಬಾಹೂದರವಕ್ತ್ರನೇತ್ರಂ(ಮ್),**
**ಪಶ್ಯಾಮಿ ತ್ವಾಂ(ಮ್) ಸರ್ವತೋಽನಂತರೂಪಮ್**
**ನಾಂತಂ(ನ್) ನ ಮಧ್ಯಂ(ನ್) ನ ಪುನಸ್ತವಾದಿಂ(ಮ್),**
**ಪಶ್ಯಾಮಿ ವಿಶ್ವೇಶ್ವರ ವಿಶ್ವರೂಪ ॥16॥**

ಹೇ ವಿಶ್ವೇಶ್ವರ! ಅನೇಕ ಕೈಗಳೂ, ಉದರಗಳೂ, ಮುಖಗಳೂ ಮತ್ತು ಕಣ್ಣುಗಳೂ ಉಳ್ಳವನಾಗಿ ಎಲ್ಲ ಕಡೆಗಳಿಂದಲೂ

ಅನಂತ ರೂಪಗಳುಳ್ಳವನಾದ ನಿನ್ನನ್ನು ನೋಡುತ್ತಿದ್ದೇನೆ. ಹೇ ವಿಶ್ವರೂಪನೇ, ನಿನ್ನ ಅಂತ್ಯವೂ ಕಾಣಿಸುತ್ತಿಲ್ಲ, ಮಧ್ಯವೂ ಮತ್ತು ಆದಿಯೂ ಸಹ ಕಾಣಿಸುತ್ತಿಲ್ಲ.

ಭಗವಂತನ ಅನಂತರೂಪವನ್ನು ಅರ್ಜುನನು ವಿವರಿಸುತ್ತಾನೆ. ದೃಷ್ಟಿ ಹಾಯಿಸಿದ ಕಡೆಯಲ್ಲೆಲ್ಲ ಭಗವಂತನೇ ಕಾಣುತ್ತಿದ್ದಾನೆ. ಅರ್ಜುನನು, "ಹೇ ವಿಶ್ವದ ಪ್ರಭುವೇ! ವಿಶ್ವರೂಪನೇ! ನಿನ್ನ ಈ ರೂಪದಲ್ಲಿ ಆದಿ, ಅಂತ್ಯ, ಮಧ್ಯ ಯಾವುದೂ ತಿಳಿಯದಾಗಿದೆ. ಕಣ್ಣು ಹಾಯಿಸಿದಲ್ಲೆಲ್ಲ ಕೇವಲ ನಿನ್ನ ರೂಪವೇ ಆವರಿಸಿದೆ." ಎಂದು ಹೇಳುತ್ತಾನೆ. ಇದೇ ಬಗೆಯ ವಿಶ್ವರೂಪದ ದರ್ಶನವನ್ನು "ಶ್ರೀರಾಮಚರಿತಮಾನಸ"ದಲ್ಲಿಯೂ ವಿವರಿಸಲಾಗಿದೆ.

ಪ್ರಭು ಶ್ರೀರಾಮನು ತೊಟ್ಟಿಲಿನಲ್ಲಿ ಆಡುವ ಪುಟ್ಟ ಕಂದನಾಗಿದ್ದ ಸಂದರ್ಭದಲ್ಲಿ ತನ್ನ ಮಾತೆ ಕೌಸಲ್ಯೆಗೆ ತನ್ನ ಅದ್ಭುತವಾದ ಅಖಂಡರೂಪವನ್ನು ತೋರಿಸಿದ್ದನು, ಎಂದು ತುಲಸೀದಾಸರು ಸುಂದರವಾಗಿ ವಿವರಿಸುತ್ತಾರೆ.

**ಚೌ - ಏಕ್ ಬಾರ್ ಜನನೀ ಅನ್ಹವಾಏ | ಕರಿ ಸಿಂಗಾರ ಪಲನಾ ಪೌಢಾಏ ||**
**ನಿಜ ಕುಲ ಇಷ್ಟದೇವ ಭಗವಾನಾ | ಪೂಜಾ ಹೇತು ಕೀನ್ಹ ಅಸ್ನಾನಾ ||**
**ಕರಿ ಪೂಜಾ ನೈಬೇದ್ಯ ಚಡಾವಾ | ಆಪು ಗಈ ಜಹ ಪಾಕ ಬನಾವಾ ||**
**ಬಹುರಿ ಮಾತು ತಹವಾ ಚಲಿ ಆಈ | ಭೋಜನ ಕರತ ದೇಖ ಸುತ ಜಾಈ ||**
**ಗೈ ಜನನೀ ಸಿಸು ಪಹಿ ಭಯಭೀತಾ | ದೇಖಾ ಬಾಲ ತಹಾ ಪುನಿ ಸೂತಾ ||**
**ಬಹುರಿ ಆಈ ದೇಖಾ ಸುತ ಸೋಈ | ಹೃದಯ ಕಂಪ ಮನ ಧೀರ ನ ಹೋಈ ||**
**ಇಹಾ ಉಹಾ ದುಇ ಬಾಲಕ ದೇಖಾ । ಮತಿಭ್ರಮ ಮೋರ ಕಿ ಆನ ಬಿಸೇಷಾ ॥**
**ದೇಖಿ ರಾಮ ಜನನೀ ಅಕುಲಾನೀ | ಪ್ರಭು ಹಸಿ ದೀನ್ಹ ಮಧುರ ಮುಸುಕಾನೀ ॥**

ಒಂದು ದಿನ ತಾಯಿ ಕೌಸಲ್ಯೆಯು ರಾಮನಿಗೆ ಸ್ನಾನಮಾಡಿಸಿ, ಶೃಂಗಾರಗೈದು, ತೊಟ್ಟಿಲಿನಲ್ಲಿ ಮಲಗಿಸಿದಳು. ಬಳಿಕ ತಾನೂ ಸ್ನಾನಮಾಡಿ ಇಷ್ಟದೇವರ ಪೂಜೆಗೆ ಸಿದ್ಧಳಾದಳು. ಪೂಜೆ ಮುಗಿಸಿ, ದೇವರಿಗೆ ನೈವೇದ್ಯವನ್ನರ್ಪಿಸಿದಳು. ಮತ್ತೆ ಅಡುಗೆಮನೆಗೆ ಹೋಗಿ ಹಿಂದಿರುಗಿ ಪೂಜಾ ಮಂದಿರಕ್ಕೆ ಬಂದಳು. ಬಂದು ನೋಡುತ್ತಾಳೆ - ದೇವರಿಗೆ ಅರ್ಪಿಸಿದ ನೈವೇದ್ಯವನ್ನು ಶ್ರೀರಾಮನು ಭುಂಜಿಸುತ್ತಿರುವನು. ಆ ದೃಶ್ಯವನ್ನು ಕಂಡು ತೊಟ್ಟಿಲಲ್ಲಿ ಮಲಗಿದ್ದ ಮಗು ಇಲ್ಲಿಗೆ ಹೇಗೆ ಬಂತು? ಎಂದು ಭಯಗೊಂಡು ಅಚ್ಚರಿಯಿಂದ ಮಗುವಿನ ಬಳಿಗೆ ಹೋದಾಗ ರಾಮನು ಮೊದಲಿನಂತೆ ತೊಟ್ಟಿಲಲ್ಲಿ ಮಲಗಿದ್ದನು, ಪುನಃ ಪೂಜಾಮಂದಿರಕ್ಕೆ ಬಂದು ನೋಡಿದರೆ ತನ್ನ ಮಗು ರಾಮನು ಅಲ್ಲೇ ಇದ್ದು ನೈವೇದ್ಯವನ್ನು ಉಣ್ಣುತ್ತಿದ್ದಾನೆ. ಇದರಿಂದ ಅವಳ ಹೃದಯ ನಡುಗಿತು. ಮನಸ್ಸಿನ ಧೈರ್ಯ ಕುಸಿಯಿತು. ಅವಳು ಯೋಚಿಸತೊಡಗಿದಳು - "ಇದೇನಿದು? ಇಲ್ಲಿ ಒಬ್ಬ ಮತ್ತು ಅಲ್ಲಿ ಮತ್ತೊಬ್ಬ ಎರಡು ರಾಮರನ್ನು ಕಾಣುತ್ತಿದ್ದೇನಲ್ಲ ಇದು ಸಂಭವವೇ? ಅಥವಾ ಇದು ನನ್ನ ಭ್ರಮೆಯೇ? ದೈವಲೀಲೆಯೇ?" ತಾಯಿಯ ಗಾಬರಿಗೊಂಡಿರುವುದನ್ನು ಕಂಡು ಪ್ರಭುವು ಮುಗುಳ್ನಗೆಯನ್ನು ಬೀರಿದನು.

**ದೋ – ದಖರಾವಾ ಮಾತಹಿ ನಿಜ ಅದ್ಭುತ ರೂಪ ಅಖಂಡ | ರೋಮ ರೋಮ ಪ್ರತಿ ಲಾಗೇ ಕೋಟಿ ಕೋಟಿ ಬ್ರಹ್ಮಂಡ ||**

ಅನಂತರ ಅವನು ತಾಯಿಗೆ ತನ್ನ ಅದ್ಭುತವಾದ ಅಖಂಡರೂಪವನ್ನು ತೋರಿಸಿದನು. ಆ ರೂಪದ ಒಂದೊಂದ ರೋಮದಲ್ಲಿಯೂ ಕೋಟಿ ಕೋಟಿ ಬ್ರಹ್ಮಾಂಡಗಳಿದ್ದವು.

**ಅಗನಿತ, ರಬಿ, ಸಸಿ, ಸಿವ ಚತುರಾನನ | ಬಹು ಗಿರಿ ಸರಿತ ಸಿಂಧು ಮಹಿ ಕಾನನ ॥**
**ಕಾಲ ಕರ್ಮ ಗುನ ಗ್ಯಾನ ಸುಭಾಊ | ಸೋಊ ದೇಖಾ ಜೋ ಸುನಾ ನ ಕಾಊ ||**
**ದೇಖೀ ಮಾಯಾ, ಸಬ ಬಿಧಿ ಗಾಡೀ | ಅತಿ ಸಭೀತ ಜೋರೇ ಕರ ಠಾಢೀ ॥**
**ದೇಖಾ ಜೀವ ನಚಾವಇ ಜಾಹೀ | ದೇಖೀ ಭಗತಿ ಜೋ ಛೋರಇ ತಾಹೀ ॥**
**ತನ ಪುಲಕಿತ ಮುಖ ಬಚನ ನ ಆವಾ | ನಯನ ಮೂದಿ ಚರನನಿ ಸಿರು ನಾವಾ ॥**
**ಬಿಸಮಯವಂತ ದೇಖಿ ಮಹತಾರೀ | ಭಏ ಬಹುರಿ ಸಿಸುರೂಪ ಖರಾರೀ ||**
**ಅಸ್ತುತಿ ಕರಿ ನ ಜಾಇ ಭಯ ಮಾನಾ | ಜಗತ ಪಿತಾ ಮೈ ಸುತ ಕರಿ ಜಾನಾ ||**
**ಹರಿ ಜನನೀ ಬಹುಬಧಿ ಸಮುಝಾಈ | ಯಹ ಜನಿ ಕತಹು ಕಹಸಿ ಸುನು ಮಾಈ ॥**

ಆ ರೂಪದಲ್ಲಿ ಗಣನೆಯಿಲ್ಲದ ಸೂರ್ಯ ಚಂದ್ರರು, ಪರಮೇಶ್ವರನು, ಬ್ರಹ್ಮಾದಿದೇವತೆಗಳು, ಅನೇಕ ಪರ್ವತಗಳು, ನದಿಗಳು, ಸಮುದ್ರಗಳು, ಪೃಥ್ವಿ ವನಗಳು, ಕಾಲ, ಕರ್ಮ, ಗುಣ, ಜ್ಞಾನ, ಸ್ವಭಾವ ಮುಂತಾದವುಗಳನ್ನೂ ಹಾಗೂ ಎಂದೂ ಕಾಣದ ಕೇಳದ ಇನ್ನೂ ಅಸಂಖ್ಯ ಪದಾರ್ಥಗಳನ್ನು ಕೌಸಲ್ಯೆಯು ನೋಡಿದಳು. ಸರ್ವಶಕ್ತಿ ಸ್ವರೂಪಿಣಿಯಾದ ಮಾಯೆಯು ಭಯದಿಂದ ಕೈ ಜೋಡಿಸಿಕೊಂಡು ಅವನ ಮುಂದೆ ನಿಂತಿದ್ದಳು. ಮಾಯೆಗೆ ಶರಣಾಗಿ ಅವಳು ಕುಣಿಸಿದಂತೆ ಕುಣಿಯುತ್ತಿರುವ ಜೀವರನ್ನು ಕಂಡಳು. ಜೀವಿಗಳನ್ನು ಮಾಯೆಯಿಂದ ಬಿಡಿಸುವ ಭಕ್ತಿಯನ್ನೂ ಕೂಡ ಅವಳು ದರ್ಶಿಸಿದಳು. ಆಕೆಯ ಶರೀರ ಪುಳಕಿತಗೊಂಡಿತು. ಬಾಯಿಯಿಂದ ಮಾತು ಹೊರಡದಾಯಿತು. ಈಗ ಈ ಸಂದರ್ಭದಲ್ಲಿ ಅರ್ಜುನನು ಯಾವ ಮನಸ್ಥಿತಿಯಲ್ಲಿ ಇದ್ದಾನೋ ಅದೇ ಪರಿಸ್ಥಿತಿಯಲ್ಲಿ ಅಂದು ಕೌಸಲ್ಯಾದೇವಿಯಿದ್ದಳು. ಭಗವಂತನಾದರೋ ಇಲ್ಲಿ ಅರ್ಜುನನಿಗೆ ತನ್ನ ರೂಪವನ್ನು ತೋರಿಸುತ್ತೇನೆ ಎಂದು ಮೊದಲು ಹೇಳಿದ್ದಾನೆ. ಆದರೆ ಮಾತೆ ಕೌಸಲ್ಯೆಯಂತೂ ಏನನ್ನೂ ಅರಿಯಳು. ಸಾಕ್ಷಾತ್ ಭಗವಂತನ ವಿಶ್ವರೂಪದ ದರ್ಶನ ಮಾಡಿದ ಮಾತೆಯು ಕಣ್ಣುಗಳನ್ನು ಮುಚ್ಚಿಕೊಂಡು ಪ್ರಭು ಶ್ರೀರಾಮನ ಚರಣಗಳಲ್ಲಿ ತಲೆಬಾಗಿದಳು. ತಾಯಿಯು ಅಚ್ಚರಿಗೊಂಡಿರುವುದನ್ನು ಕಂಡು ಪ್ರಭು ಶ್ರೀರಾಮಚಂದ್ರನು ಪುನಃ ಬಾಲರೂಪಕ್ಕೆ ಮರಳಿದನು. ಮುಚ್ಚಿದ್ದ ಕಣ್ಣು ತೆರೆದ ಕೌಸಲ್ಯೆಗೆ ಬಾಲರಾಮನ ದರ್ಶನವಾಯಿತು. ತನ್ನ ಪರಿಸ್ಥಿತಿಯನ್ನು ಅವಳೇ ನಂಬದಾದಳು. ಸಾಕ್ಷಾತ್ ಪರಮೇಶ್ವರನನ್ನು ತಾನು ತನ್ನ ಪುಟ್ಟ ಮಗನೆಂದು ಬಗೆದೆನಲ್ಲ ಎಂದು ಅಂಜಿದಳು. ಹೆದರಿ ನಿಂತ ತಾಯಿಯನ್ನು ಪರಿಪರಿಯಾಗಿ ಶ್ರೀರಾಮನು ಸಂತೈಸಿದನು. ಮತ್ತು ಕೊನೆಯಲ್ಲಿ ಈ ವಿಷಯವನ್ನು ಯಾರಿಗೂ ಹೇಳಕೂಡದು ಎಂದು ಹೇಳಿದನು.

**ದೋ - ಬಾರ ಬಾರ ಕೋಸಲ್ಯಾ ಬಿನಯ ಕರಇ ಕರ ಜೋರಿ |**
**ಅಬ ಜನಿ ಕಬಹೂ ಬ್ಯಾಪೈ ಪ್ರಭು ಮೊಹಿ ಮಾಯಾ ತೋರಿ ಈ ||**

ರಾಮನ ಮಾತಿಗೆ ಪ್ರತಿಯಾಗಿ ಕೌಸಲ್ಯೆಯು ಸಮ್ಮತಿಯನ್ನು ಸೂಚಿಸಿದಳು. ಮತ್ತು ಪದೇ ಪದೇ ವಿನಯದಿಂದ ಕೈ ಜೋಡಿಸಿ, "ಪ್ರಭುವೇ ಈ ನಿನ್ನ ಮಾಯೆಯು ಮುಂದೆಂದೂ ನನಗೆ ಕವಿಯದಿರಲಿ, ಭಕ್ತಿಯಿಂದ ಮಾಯೆಯನ್ನು ಗೆಲ್ಲಬಹುದು ಎಂದು ತೋರಿಸಿದ್ದೀಯ. ಆ ಭಕ್ತಿಯೊಂದೆ ನನಗೆ ದಯಪಾಲಿಸು" ಎಂದು ಪ್ರಾರ್ಥಿಸಿದಳು. ಭಗವಂತನು ಪ್ರಸನ್ನನಾಗಿ ಒಪ್ಪಿಗೆ ಸೂಚಿಸಿದನು.

ಮುಂದೆ ಕೌಸಲ್ಯೆಯು ರಾಮನು ಅರಣ್ಯಕ್ಕೆ ಹೋಗುವ ಕಾಲದಲ್ಲಿ ಕೂಡಾ ತನ್ನ ಸ್ಥಿತಪ್ರಜ್ಞತೆಯನ್ನು ಮೆರೆದಳು. ಮೌನದಿಂದ, ಎಲ್ಲಾ ಭಗವಂತನ ಆಸೆಯಂತೆ ನೆರವೇರಲಿ ಎಂದುಕೊಂಡು ಶ್ರೀರಾಮ, ಲಕ್ಷ್ಮಣ ಮತ್ತು ಸೀತೆಯರು ಅರಣ್ಯಕ್ಕೆ ಹೋಗಲು ಅಪ್ಪಣೆ ಕೊಟ್ಟಳು.

**11.17**

**ಕಿರೀಟಿನಂ(ಜ್) ಗದಿನಂ ಚಕ್ರಿಣಂ(ಞ್) ಚ,**
**ತೇಜೋರಾಶಿಂ(ಮ್) ಸರ್ವತೋ ದೀಪ್ತಿಮಂತಮ್**
**ಪಶ್ಯಾಮಿ ತ್ವಾಂ(ನ್) ದುರ್ನಿರೀಕ್ಷ್ಯಂ(ಮ್) ಸಮಂತಾದ್,**
**ದೀಪ್ತಾನಲಾರ್ಕದ್ಯುತಿಮಪ್ರಮೇಯಮ್ ||17||**

ಕಿರೀಟ, ಗದೆ, ಚಕ್ರ ಮುಂತಾದುವುಗಳನ್ನು ಧರಿಸಿರುವ, ಎಲ್ಲೆಲ್ಲಿಯೂ ಪ್ರಕಾಶಮಯವಾದ ತೇಜಃಪುಂಜಗಳು ಪ್ರಜ್ವಲಿಸುವ, ಅಗ್ನಿ ಮತ್ತು ಸೂರ್ಯರಂತಹ ಜ್ಯೋತಿಗಳಿಂದ ಕೂಡಿರುವ, ನೋಡಲು ಅಸಾಧ್ಯವಾದ, ಅಪ್ರಮೇಯ ಸ್ವರೂಪಿಯಾದ ನಿನ್ನನ್ನು ಎಲ್ಲಾ ಕಡೆಗಳಿಂದಲೂ ನೋಡುತ್ತಿದ್ದೇನೆ.

ಮುಕುಟದಿಂದ ಅಲಂಕೃತನಾಗಿ, ಗದಾಧಾರಿಯಾಗಿ ಮತ್ತು ಚಕ್ರಪಾಣಿಯಾಗಿ ಎಲ್ಲಾ ಕಡೆಗಳಿಂದಲೂ ಪ್ರಕಾಶಮಾನವಾದ ತೇಜಃಪುಂಜದಂತೆ ಹೊಳೆಯುತ್ತಿರುವ, ಅಗ್ನಿಯಂತೆ ಪ್ರಜ್ವಲಿಸುತ್ತಿರುವ, ಸಹಸ್ರ ಸೂರ್ಯರ ಕಿರಣಗಳಿಗೆ ಸಮಾನವಾದ ಅಪ್ರಮೇಯ ಸ್ವರೂಪಿ ಭಗವಂತನನ್ನು ನೋಡಲು ಅರ್ಜುನನ ಕಣ್ಣುಗಳಿಗೆ ಸಾಧ್ಯವಾಗುತ್ತಿಲ್ಲ. ಮಧ್ಯಾಹ್ನದ ಸಮಯದಲ್ಲಿ ನಾವು ಸೂರ್ಯನನ್ನು ನೋಡಲು ಪ್ರಯತ್ನಿಸಿದಾಗ ಕಣ್ಣು ಮುಚ್ಚಿ ಹೋಗುತ್ತದೆ. ಪ್ರಖರವಾದ ಸೂರ್ಯ ಕಿರಣಗಳು ನಮ್ಮ ಕಣ್ಣುಗಳನ್ನು ಮುಚ್ಚುವಂತೆ ಮಾಡಿಬಿಡುತ್ತದೆ. ಅರ್ಜುನನ ಪರಿಸ್ಥಿತಿಯೂ ಇಲ್ಲಿ ಇದೇ ಆಗಿದೆ. ಭಗವಂತನ ಜ್ಯೋತಿರ್ಮಯ ರೂಪವನ್ನು ನೋಡಲು ಅರ್ಜುನನ

ಕಣ್ಣುಗಳಿಂದ ಸಾಧ್ಯವಾಗುತ್ತಿಲ್ಲ. ಅರ್ಜುನನು ಭಗವಂತನನ್ನು 'ಅಪ್ರಮೇಯ' ಎಂದು ಹೇಳುತ್ತಾನೆ. 'ಅಪ್ರಮೇಯ' ಎಂದರೆ "ಪ್ರಮಾಣಕ್ಕೆ ನಿಲುಕದ ವಿಚಾರ" ಎಂದು ಅರ್ಥ.

ಶಾಸ್ತ್ರದಲ್ಲಿ ಆರು ಬಗೆಯ 'ಪ್ರಮಾಣ'ಗಳನ್ನು ಸೂಚಿಸಲಾಗಿದೆ. ಸತ್ಯವನ್ನು ತಿಳಿಯಲು ಬೇಕಾದ, ಅನುಸರಿಸಬೇಕಾದ ಮಾರ್ಗಗಳು :

೧. ಪ್ರತ್ಯಕ್ಷ : ಇಂದ್ರಿಯಾನುಭವದ ಅರ್ಥಾತ್ ಪ್ರತ್ಯಕ್ಷ ಪ್ರಮಾಣ. ಪ್ರತ್ಯಕ್ಷ ಪ್ರಮಾಣದಲ್ಲಿ ಮಿತಿಯಿರುತ್ತದೆ. ದೂರದ ಮತ್ತು ಸೂಕ್ಷ್ಮ ವಿಚಾರಗಳನ್ನು ಸರಿಯಾಗಿ ತಿಳಿಯಲು ಸಾಧ್ಯವಿಲ್ಲ.

೨. ಅನುಮಾನ : ಕಾಣುವುದರ ನೆರವಿನಿಂದ ಕಾಣದನ್ನು ತಿಳಿಯುವುದು. ಉದಾಹರಣೆಗೆ ನಾವು ಹೋಗುತ್ತಿರುವ ದಾರಿಯಲ್ಲಿ ನೆಲ ಒದ್ದೆಯಾಗಿದ್ದನ್ನು ಕಂಡು ಈ ಮೊದಲು ಇಲ್ಲಿ ಮಳೆ ಬಂದಿತ್ತು ಎಂಬ ಪ್ರಮಾಣವನ್ನು ಮಾಡುತ್ತೇವೆ. ಮಳೆ ಬಂದಿದ್ದು ನಮಗೆ ಕಂಡಿಲ್ಲ. ಆದರೆ ಒದ್ದೆಯಾದ ನೆಲ ಅದರ ಪ್ರಮಾಣ.

3. ಆಗಮ : ಶಾಸ್ತ್ರಗಳನ್ನೂ ಇತಿಹಾಸಗಳನ್ನೂ ಹಿಂದೆ ಬರೆದದನ್ನು ಓದಿ ಕೇಳಿ ತಿಳಿದುಕೊಳ್ಳುತ್ತೇವೆ. ಮೊದಲ ಹಾಗೂ ಎರಡನೇ ಮಹಾಯುದ್ಧಗಳು ನಡೆದದ್ದು ನಾವು ಇತಿಹಾಸದಲ್ಲಿ ಯಾರೋ ಬರೆದದನ್ನು ಓದಿ ಪ್ರಮಾಣೀಕರಿಸುತ್ತೇವೆ.

4. ಉಪಮಾನ : ಪ್ರತ್ಯಕ್ಷ ಕಾಣದೇ ಇದ್ದರೂ ತಿಳಿದ ವಿಚಾರ. ಭೂಮಿಯ ಒಳಗೆ ನೀರು ಇರುವುದು ಕಾಣುವುದಿಲ್ಲ. ಆದರೆ ಭೂಮಿಯ ಅಡಿಯಲ್ಲಿ ನೀರು ಇದೇ ಎಂಬುದಕ್ಕೆ ಪ್ರಮಾಣವಿದೆ.

5. ಅರ್ಥಪತ್ತಿ : ಯಾರಿಂದಲೋ ತಿಳಿದ ಆ ವಸ್ತುವಿನ ಬಗ್ಗೆ ಪ್ರಮಾಣ. ಒಂದು ವಸ್ತುವಿನ ಅರ್ಥವಿವರಣೆಯನ್ನು ಕೇಳಿ ಅದರ ಚಿತ್ರವನ್ನು ಪ್ರಮಾಣೀಕರಿಸುವುದು. ಉದಾಹರಣೆಗೆ ಒಬ್ಬರಿಂದ ಹೈದ್ರಾಬಾದ್ ನಲ್ಲಿರುವ ಚಾರ್ ಮಿನಾರ್ ಬಗ್ಗೆ ಕೇಳಿ ತಿಳಿದಿರುತ್ತೇವೆ. ಆಮೇಲೆ ಆ ಬಗೆಯ ಚಿತ್ರ ಎಲ್ಲಿ ಕಾಣಿಸಿದರೂ ಅದು ಚಾರ್ ಮಿನಾರ್ ಇರಬಹುದು ಎಂದು ಊಹಿಸುತ್ತೇವೆ.

6. ಅಭಾವ : ಇದು ಒಂದು ವಸ್ತುವಿನ ಅಭಾವದ ಪ್ರಮಾಣದಿಂದ ಇನ್ನೊಂದು ವಸ್ತು ಹೆಚ್ಚು ಇರುವುದು. ಉದಾಹರಣೆಗೆ ನಮ್ಮ ಬಡಾವಣೆಯಲ್ಲಿ ಇಲಿಗಳು ತಂಬಾ ಇವೆ ಎಂದರೆ ಅಲ್ಲಿ ಬೆಕ್ಕುಗಳ ಅಭಾವ ಇದೇ ಎಂಬ ಪ್ರಮಾಣವನ್ನು ಮಾಡಬಹುದು.

ಈ ಆರೂ ಬಗೆಯ ಪ್ರಮಾಣಕ್ಕೂ ಭಗವಂತ ಇಲ್ಲಿ ನಿಲುಕದವನಾಗಿದ್ದಾನೆ "ಅಪ್ರಮೇಯ". ಯಾವ ಪ್ರಮಾಣಕ್ಕೂ ಸಿಲುಕದ ಭಗವಂತನ ದಿವ್ಯರೂಪದ ದರ್ಶನವನ್ನು ಮಾಡಿದ ಅರ್ಜುನನಿಗೆ ಆ ಸ್ವರೂಪವನ್ನು ಬಹಳ ಹೊತ್ತು ನೋಡುವುದೂ ಕಷ್ಟ ಸಾಧ್ಯವಾಗಿದೆ.

**11.18**

**ತ್ವಮಕ್ಷರಂ(ಮ್) ಪರಮಂ(ಮ್) ವೇದಿತವ್ಯಂ(ನ್),**
**ತ್ವಮಸ್ಯ ವಿಶ್ವಸ್ಯ ಪರಂ(ನ್) ನಿಧಾನಮ್**
**ತ್ವಮವ್ಯಯಃ(ಶ್) ಶಾಶ್ವತಧರ್ಮಗೋಪ್ತಾ**
**ಸನಾತನಸ್ತ್ವಂ(ಮ್) ಪುರುಷೋ ಮತೋ ಮೇ ॥18॥**

ತಿಳಿದುಕೊಳ್ಳಲೇ ಬೇಕಾದಂತಹ ಪರಬ್ರಹ್ಮ ಪರಮಾತ್ಮನು ನೀನೇ, ಈ ಜಗತ್ತಿಗೆ ಪರಮ ಆಶ್ರಯವೂ ನೀನೇ, ಅನಾದಿ ಧರ್ಮ ಸಂರಕ್ಷಕನೂ ನೀನೇ, ಮತ್ತು ಅವಿನಾಶೀ ಸನಾತನ ಪುರುಷನೂ ನೀನೇ ಎಂದು ನನ್ನ ಅಭಿಪ್ರಾಯ.

ನೀನು ಕ್ಷಯಿಸದವನು, ಈ ಜಗತ್ತಿನ ಪರಮಾಧಾರನು ನೀನೇ. ನೀನು ಶಾಶ್ವತ ಧರ್ಮಪಾಲಕನು, ದೇವೋತ್ತಮ ಪರಮ ಪುರುಷನು ಎಂಬುದು ನನಗೆ ತಿಳಿಯಿತು.

**11.19**

**ಅನಾದಿಮಧ್ಯಾಂತಮನಂತವೀರ್ಯಮ್,**
**ಅನಂತಬಾಹುಂ(ಮ್) ಶಶಿಸೂರ್ಯನೇತ್ರಮ್**
**ಪಶ್ಯಾಮಿ ತ್ವಾಂ(ನ್) ದೀಪ್ತಹುತಾಶವಕ್ತ್ರಮ್(ಮ್),**
**ಸ್ವತೇಜಸಾ ವಿಶ್ವಮಿದಂ(ನ್) ತಪಂತಮ್ ॥19॥**

ಆದಿ, ಮಧ್ಯ ಮತ್ತು ಅಂತ್ಯಗಳಿಲ್ಲದವನೂ, ಅನಂತ ಸಾಮರ್ಥ್ಯವುಳ್ಳವನೂ, ಅನಂತ ಕೈಗಳುಳ್ಳವನೂ, ಚಂದ್ರ ಸೂರ್ಯರನ್ನೇ ಕಣ್ಣುಗಳಾಗಿ ಉಳ್ಳವನೂ, ಪ್ರಜ್ವಲಿಸುವ ಅಗ್ನಿರೂಪೀ ಮುಖವುಳ್ಳವನೂ, ಮತ್ತು ನಿನ್ನ ತೇಜಸ್ಸಿನಿಂದಲೇ ಈ ಜಗತ್ತಿಗೆ ತಾಪವನ್ನು ಕೊಡುತ್ತಿರುವ ನಿನ್ನನ್ನು ನೋಡುತ್ತಿದ್ದೇನೆ.

ನಿನ್ನನ್ನು ಆದಿ, ಅಂತ್ಯ ಮತ್ತು ಮಧ್ಯ ರಹಿತನಾಗಿ, ಅನಂತ ಸಾಮರ್ಥ್ಯದಿಂದ ಕೂಡಿದವನಾಗಿ, ಅಸಂಖ್ಯಾತ ತೋಳುಗಳನ್ನು ಹೊಂದಿದವನಾಗಿ, ಚಂದ್ರ - ಸೂರ್ಯ ರೂಪವಾದ ನೇತ್ರಗಳುಳ್ಳವನಾಗಿ ನೋಡುತ್ತಿದ್ದೇನೆ. ಹದಿನಾರನೇ ಶ್ಲೋಕದಲ್ಲಿ ಭಗವಂತನ ದೇಹಭಾವಕ್ಕೆ ಸಂಬಂಧಪಟ್ಟಂತೆ, ಅವನ ಆಕಾರವನ್ನು ನೋಡಿ, ಆದಿ ಅಂತ್ಯಗಳ ಬಗ್ಗೆ ಹೇಳಿದ್ದ ಅರ್ಜುನನು ಈಗ ಕಾಲಭಾವಕ್ಕೆ ಅನುಗುಣವಾಗಿ ಭಗವಂತನನ್ನು ವರ್ಣಿಸುತ್ತಿದ್ದಾನೆ. ಭಗವಂತನ ಹುಟ್ಟು, ಅವನ ಅಸ್ತಿತ್ವದ ಬಗ್ಗೆ ಅರ್ಜುನ ಮಾತನಾಡುತ್ತಿದ್ದಾನೆ. 'ಉರಿಯುತ್ತಿರುವ ಅಗ್ನಿಯ ಮುಖವನ್ನು ಹೊಂದಿದವನಾಗಿ, ನಿನ್ನ ತೇಜಸ್ಸಿನಿಂದ ವಿಶ್ವವನ್ನೇ ಸುಡುತ್ತಿರುವವನಂತೆ ಕಾಣುತ್ತಿದ್ದೀಯ ಭಗವಂತ', ಎಂದು ಅರ್ಜುನ ಹೇಳುತ್ತಿದ್ದಾನೆ.

ಅರ್ಜುನನಾದರೋ ವಿಶ್ವರೂಪವೆಂದರೆ ಮಂದಸ್ಮಿತ ಭಗವಂತನ ಸುಂದರ ರೂಪವನ್ನು ನೋಡಬಹುದು ಎಂದುಕೊಂಡಿದ್ದನು. ಆದರೆ ಇಲ್ಲಿ ಪರಿಸ್ಥಿತಿಯೇ ಬೇರೆಯಾಗಿದೆ. ಭಗವಂತನನ್ನು ದೃಷ್ಟಿ ಇಟ್ಟು ನೋಡಲು ಕೂಡಾ ಅರ್ಜುನನ ಕಣ್ಣುಗಳು ಅಸಮರ್ಥವಾಗಿವೆ. ಮತ್ತು ಭಗವಂತನ ವಿಶ್ವರೂಪವು ಅರ್ಜುನನಲ್ಲಿ ಸಣ್ಣ ಭಯವನ್ನೂ ಹುಟ್ಟಿಸುತ್ತಿದೆ.

**11.20**

**ದ್ಯಾವಾಪೃಥಿವ್ಯೋರಿದಮಂತರಂ(ಮ್) ಹಿ,**
**ವ್ಯಾಪ್ತಂ(ನ್) ತ್ವಯೈಕೇನ ದಿಶಶ್ಚ ಸರ್ವಾಃ**
**ದೃಷ್ಟ್ವಾದ್ಭುತಂ(ಮ್) ರೂಪಮುಗ್ರಂ(ನ್) ತವೇದಂ(ಮ್),**
**ಲೋಕತ್ರಯಂ(ಮ್) ಪ್ರವ್ಯಥಿತಂ(ಮ್) ಮಹಾತ್ಮನ್ ॥20॥**

ಓ ಮಹಾತ್ಮ! ಈ ಸ್ವರ್ಗ ಮತ್ತು ಭೂಮಿಯ ಮಧ್ಯದ ಪೂರ್ಣ ಆಕಾಶ ಹಾಗು ಎಲ್ಲಾ ದಿಕ್ಕುಗಳೂ ನಿನ್ನೊಬ್ಬನಿಂದಲೇ ಪರಿಪೂರ್ಣವಾಗಿದೆ. ನಿನ್ನ ಈ ಅಲೌಕಿಕ ಮತ್ತು ಭಯಾನಕ ರೂಪವನ್ನು ನೋಡಿ ಮೂರು ಲೋಕಗಳೂ ಭೀತಿಗೊಂಡಿವೆ.

ಅರ್ಜುನ ಹೇಳುತಾನ್ತೆ, "ಹೇ ಮಹಾತ್ಮನೇ! ಈ ಸ್ವರ್ಗ ಮತ್ತು ಪೃಥ್ವಿಯ ನಡುವಿನ ಸಂಪೂರ್ಣ ಆಕಾಶ ಹಾಗೂ ಎಲ್ಲಾ ದಿಕ್ಕುಗಳೂ ನಿನ್ನಿಂದಲೇ ಪರಿಪೂರ್ಣವಾಗಿದೆ. ನಿನ್ನ ಈ ಅಲೌಕಿಕ ಮತ್ತು ಭಯಂಕರವಾದ ರೂಪವನ್ನು ನೋಡಿ ಮೂರು ಲೋಕಗಳೂ ಅತಿಯಾದ ಭಯದಿಂದ ಕಂಪಿಸುತ್ತಿವೆ".

**11.21**

**ಅಮೀ ಹಿ ತ್ವಾಂ(ಮ್) ಸುರಸಂಘಾ ವಿಶಂತಿ,**
**ಕೇಚಿದ್ಭೀತಾಃ(ಫ್) ಪ್ರಾಂಜಲಯೋ ಗೃಣಂತಿ**

**ಸ್ವಸ್ತೀತ್ಯುಕ್ತ್ವಾ ಮಹರ್ಷಿಸಿದ್ಧಸಂಘಾಃ(ಸ್),**
**ಸ್ತುವಂತಿ ತ್ವಾಂ(ಮ್) ಸ್ತುತಿಭಿಃ(ಫ್) ಪುಷ್ಕಲಾಭಿಃ ॥21॥**

ಆ ದೇವತಾ ಸಮೂಹಗಳು ನಿನ್ನಲ್ಲಿ ಪ್ರವೇಶಿಸುತ್ತಿವೆ. ಕೆಲವರು ಭಯಭೀತರಾಗಿ ಕೈ ಜೋಡಿಸಿಕೊಂಡು ನಿನ್ನ ನಾಮ ಮತ್ತು ಗುಣಗಳನ್ನು ಸ್ಮರಿಸುತ್ತಾರೆ. ಮಹರ್ಷಿಗಳ ಮತ್ತು ಸಿದ್ಧರ ಸಮುದಾಯಗಳು 'ಮಂಗಳವಾಗಲಿ' ಎಂಬುದಾಗಿ ಹೇಳಿ ಉತ್ಕೃಷ್ಟವಾದ ಸ್ತೋತ್ರಗಳ ಮೂಲಕ ನಿನ್ನನ್ನು ಭಜಿಸುತ್ತಾರೆ.

ದೇವಾನುದೇವತೆಗಳು ನಿನ್ನನ್ನು ಪ್ರವೇಶಿಸುತ್ತಿದ್ದಾರೆ. ಕೆಲವರು ಭಯದಿಂದ ಕೈ ಮುಗಿದು ಪ್ರಾರ್ಥಿಸುತ್ತಿದ್ದಾರೆ. ಮಹರ್ಷಿಗಳು ಮತ್ತು ಸಿದ್ಧ ಪುರುಷರು ಸಕಲವೂ ಶಾಂತಿಯಿಂದಿರಲಿ ಎಂದು ಹೇಳುತ್ತಾ ವೇದಮಂತ್ರಗಳಿಂದ, ಸ್ತೋತ್ರಗಳಿಂದ ನಿನ್ನನ್ನು ಸ್ತುತಿಸುತ್ತಿದ್ದಾರೆ.

ಅರ್ಜುನನಿಗೆ ಇಲ್ಲಿ ಎಲ್ಲಾ ಬಗೆಯ ಜನರೂ ಕಾಣುತ್ತಿದ್ದಾರೆ. ಒಬ್ಬರು ಭಯಗೊಂಡಿದ್ದರೆ ಇನ್ನೊಬ್ಬರು ವೇದಮಂತ್ರಗಳಿಂದ ಹಾಡಿ ಹೊಗಳುತ್ತಿದ್ದಾರೆ. ನಮ್ಮ ನಮ್ಮ ದೃಷ್ಟಿಯಂತೆ ನಮ್ಮ ಭಾವ. ಒಂದು ಮಗುವನ್ನು ತಾಯಿ ಪ್ರೀತಿಯಿಂದ ನೋಡಿದರೆ, ಒಂದು ಕ್ರೂರ ಮೃಗವು ಆ ಮಗುವನ್ನು ತನ್ನ ಆಹಾರದಂತೆ ಕಾಣುತ್ತದೆ.

ನಮ್ಮ ಮನೆಗಳಲ್ಲಿ ಯಾವುದಾದರೂ ಪೂಜೆ ಇಟ್ಟುಕೊಂಡಾಗ ಪುರೋಹಿತರು ಈ ಭಾವಾಂತರಂಗದ ಶುದ್ಧಿಗಾಗಿ ಮಂತ್ರವನ್ನು ಹೇಳುತ್ತಾರೆ.

**ಓಂ ಅಪವಿತ್ರಃ ಪವಿತ್ರೋ ವಾ ಸರ್ವಾ ವಸ್ಥಾಂ ಗತೋ ಪಿ ವಾ |**
**ಯಃ ಸ್ಮರೇತ್ ಪುಂಡರೀಕಾಕ್ಷಂ ಸಭಾಹಾಭ್ಯಾಂತರಃ ಶುಚಿಃ ||**

ಪುಂಡರೀಕಾಕ್ಷನ ಸ್ಮರಣೆಯನ್ನು ಮಾಡಿ ನಿನ್ನನ್ನು ನೀನು ಶುದ್ಧಿ ಮಾಡಿಕೋ, ಎಂದು ಇದರ ಅರ್ಥ.

**11.22**

**ರುದ್ರಾದಿತ್ಯಾ ವಸವೋ ಯೇ ಚ ಸಾಧ್ಯಾ**
**ವಿಶ್ವೇಽಶ್ವಿನೌ ಮರುತಶ್ಚೋಷ್ಮಪಾಶ್ಚ**
**ಗಂಧರ್ವಯಕ್ಷಾಸುರಸಿದ್ಧಸಂಘಾ,**
**ವೀಕ್ಷಂತೇ ತ್ವಾಂ(ಮ್) ವಿಸ್ಮಿತಾಶ್ಚೈವ ಸರ್ವೇ ॥22॥**

ಏಕಾದಶ ರುದ್ರರು, ದ್ವಾದಶ ಆದಿತ್ಯರು, ಅಷ್ಟವಸುಗಳು, ಸಾಧ್ಯರ ಗಣಗಳು, ವಿಶ್ವೇದೇವ, ಅಶ್ವಿನೀಕುಮಾರರು, ಮರುದ್ಗಣಗಳು, ಪಿತೃಸಮುದಾಯ, ಗಂಧರ್ವ, ಯಕ್ಷ, ರಾಕ್ಷಸ ಮತ್ತು ಸಿದ್ಧರ ಸಮುದಾಯ ಇವುಗಳೆಲ್ಲವೂ ಆಶ್ಚರ್ಯಭರಿತವಾಗಿ ನಿನ್ನನ್ನು ನೋಡುತ್ತಾರೆ.

ಏಕಾದಶ ರುದ್ರರು ಸೇರಿ ಮುಕ್ಕೋಟಿ ದೇವತೆಗಳೂ ವಿಸ್ಮಿತರಾಗಿ ನಿನ್ನ ಈ ರೂಪವನ್ನು ನೋಡುತ್ತಿದ್ದಾರೆ ಎಂದು ಅರ್ಜುನ ಹೇಳುತ್ತಾನೆ. ಭಗವಂತನು ವಿವರಿಸಿದ ವಿಭೂತಿಗಳೆಲ್ಲರೂ ಅವನ ಸ್ತುತಿ ಮಾಡುತ್ತಿದ್ದಾರೆ.

**11.23**

**ರೂಪಂ(ಮ್) ಮಹತ್ತೇ ಬಹುವಕ್ತ್ರನೇತ್ರಂ(ಮ್),**
**ಮಹಾಬಾಹೋ ಬಹುಬಾಹೂರುಪಾದಮ್**
**ಬಹೂದರಂ(ಮ್) ಬಹುದಂಷ್ಟ್ರಾಕರಾಲಂ(ನ್),**
**ದೃಷ್ಟ್ವಾ ಲೋಕಾಃ(ಫ್) ಪ್ರವ್ಯಥಿತಾಸ್ತಥಾಹಮ್ ॥23॥**

ಹೇ ಮಹಾನುಭಾಹುವೇ! ಅನೇಕ ಮುಖಗಳೂ, ಕಣ್ಣುಗಳೂ, ಅನೇಕ ಕೈಗಳೂ, ತೊಡೆಗಳೂ ಮತ್ತು ಕಾಲುಗಳೂ,

ಅನೇಕ ಉದರಗಳೂ, ಅನೇಕ ವಿಕಾರ ಕೋರೆದಾಡೆಗಳೂ ಉಳ್ಳ ನಿನ್ನ ಮಹತ್ತಾದ ರೂಪವನ್ನು ನೋಡಿ ಲೋಕಗಳೆಲ್ಲಾ ಭಯಭೀತಗೊಳ್ಳುತ್ತಿವೆ. ನನಗೂ ಸಹ ಭಯವಾಗುತ್ತಿದೆ.

ಭಗವಂತನ ಮಹತ್ತಾದ ರೂಪವನ್ನು ನೋಡಿ ಅರ್ಜುನನು ವ್ಯಾಕುಲಗೊಂಡಿದ್ದಾನೆ. ಮತ್ತು ಇದೇ ಪರಿಸ್ಥಿತಿಯು ಎಲ್ಲರಲ್ಲೂ ಉಂಟಾಗಿದೆ ಎಂದು ಭಾವಿಸಿ ಹೇಳುತ್ತಿದ್ದಾನೆ. ಎಲ್ಲಾ ಲೋಕಗಳೂ ನಿನ್ನ ರೂಪವನ್ನು ನೋಡಿ ಭಯಭೀತರಾಗಿದ್ದಾರೆ ಎಂದು ಅರ್ಜುನ ಭಗವಂತನಿಗೆ ಹೇಳುತ್ತಿದ್ದಾನೆ.

**11.24**

**ನಭಃ(ಸ್)ಸ್ಪೃಶಂ(ನ್) ದೀಪ್ತಮನೇಕವರ್ಣಂ(ಮ್),**
**ವ್ಯಾತ್ತಾನನಂ(ನ್) ದೀಪ್ತವಿಶಾಲನೇತ್ರಮ್**
**ದೃಷ್ಟ್ವಾ ಹಿ ತ್ವಾಂ(ಮ್) ಪ್ರವ್ಯಥಿತಾಂತರಾತ್ಮಾ,**
**ಧೃತಿಂ(ನ್) ನ ವಿಂದಾಮಿ ಶಮಂ(ಞ್) ಚ ವಿಷ್ಣೋ ॥24॥**

ಏಕೆಂದರೆ, ಓ ವಿಷ್ಣುವೇ! ಆಕಾಶವನ್ನು ಸ್ಪರ್ಶಿಸಿರುವವನೂ, ತೇಜೋಮಯನೂ, ಅನೇಕ ವರ್ಣಗಳುಳ್ಳವನೂ, ವಿಶಾಲವಾದ ತೆರೆದ ಬಾಯಿಗಳುಳ್ಳವನೂ, ಪ್ರಕಾಶಮಾನವಾದ ವಿಶಾಲ ಕಣ್ಣುಗಳುಳ್ಳವನೂ ಆದ ನಿನ್ನನ್ನು ನೋಡಿ ಭಯಭೀತನಾಗಿ ನಾನು ಧೈರ್ಯ ಮತ್ತು ಶಾಂತಿ ಕಳೆದುಕೊಂಡಿದ್ದೇನೆ.

ಹೇ ವಿಷ್ಣುವೇ! ನಿನ್ನ ಈ ದೇದೀಪ್ಯಮಾನವಾದ, ಆಕಾಶವನ್ನೇ ಸ್ಪರ್ಶಿಸುತ್ತಿರುವ, ತೆರೆದ ಬಾಯಿಗಳುಳ್ಳ ಪ್ರಕಾಶಮಾನವಾದ ವಿಶಾಲ ನೇತ್ರಗಳನ್ನು ಹೊಂದಿರುವ ರೂಪವನ್ನು ನೋಡಿ ನಾನು ಧೈರ್ಯ ಮತ್ತು ಶಾಂತಿಯನ್ನು ಕಳೆದುಕೊಳ್ಳುತ್ತಿದ್ದೇನೆ ಎಂದು ಅರ್ಜುನನು ಹೇಳುತ್ತಿದ್ದಾನೆ.

ಅರ್ಜುನನು ಭಯದಿಂದ ತನ್ನ ಮಾನಸಿಕ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾನೆ.

**11.25**

**ದಂಷ್ಟ್ರಾಕರಾಲಾನಿ ಚ ತೇ ಮುಖಾನಿ,**
**ದೃಷ್ಟ್ವೈವ ಕಾಲಾನಲಸನ್ನಿಭಾನಿ**
**ದಿಶೋ ನ ಜಾನೇ ನ ಲಭೇ ಚ ಶರ್ಮ,**
**ಪ್ರಸೀದ ದೇವೇಶ ಜಗನ್ನಿವಾಸ ॥25॥**

ನಿನ್ನ ವಿಕಾರ ಕೋರೆದಾಡೆಗಳನ್ನು ಮತ್ತು ಪ್ರಳಯಾಗ್ನಿಯಂತೆ ಪ್ರಜ್ವಲಿಸುವ ಮುಖಗಳನ್ನು ನೋಡಿ ದಿಕ್ಕುಕಾಣದಾಗಿದ್ದೇನೆ ಮತ್ತು ನೆಮ್ಮದಿಯೂ ಸಿಗುತ್ತಿಲ್ಲ. ಆದುದರಿಂದ, ಹೇ ದೇವೇಶ! ಓ ಜಗನ್ನಿವಾಸ! ಪ್ರಸನ್ನನಾಗು.

ಭಗವಂತನ ರುದ್ರಭಯಂಕರ ರೂಪವನ್ನು ನೋಡಿದ ಅರ್ಜುನನು ದಿಕ್ಕುಕಾಣದಾಗಿದ್ದಾನೆ. ಮೋಹಗ್ರಸ್ತನಾಗಿ ನೆಮ್ಮದಿಯನ್ನು ಕಳೆದುಕೊಳ್ಳುತ್ತಿದ್ದಾನೆ. ಈಗ ಅರ್ಜುನನು ದೈನ್ಯದಿಂದ ಭಗವಂತನಲ್ಲಿ "ಹೇ ಜಗನ್ನಿವಾಸನೇ! ಪ್ರಸನ್ನನಾಗು" ಎಂದು ಪ್ರಾರ್ಥಿಸುತ್ತಾನೆ.

**11.26, 11.27**

**ಅಮೀ ಚ ತ್ವಾಂ(ನ್) ಧೃತರಾಷ್ಟ್ರಸ್ಯ ಪುತ್ರಾಃ(ಸ್),**
**ಸರ್ವೇ ಸಹೈವಾವನಿಪಾಲಸಂಘೈಃ**
**ಭೀಷ್ಮೋ ದ್ರೋಣಃ(ಸ್) ಸೂತಪುತ್ರಸ್ತಥಾಸೌ,**

**ಸಹಾಸ್ಮದೀಯೈರಪಿ ಯೋಧಮುಖ್ಯೈಃ ॥26॥**
**ವಕ್ತ್ರಾಣಿ ತೇ ತ್ವರಮಾಣಾ ವಿಶಂತಿ,**
**ದಂಷ್ಟ್ರಾಕರಾಲಾನಿ ಭಯಾನಕಾನಿ**
**ಕೇಚಿದ್ವಿಲಗ್ನಾ ದಶನಾಂತರೇಷು,**
**ಸಂದೃಶ್ಯಂತೇ ಚೂರ್ಣಿತೈರುತ್ತಮಾಂಗೈಃ ॥27॥**

ಧೃತರಾಷ್ಟ್ರನ ಆ ಸಮಸ್ತ ಪುತ್ರರು ರಾಜರುಗಳ ಸಮುದಾಯದ ಸಹಿತ ನಿನ್ನಲ್ಲಿ ಪ್ರವೇಶಿಸುತ್ತಿದ್ದಾರೆ ಮತ್ತು ಭೀಷ್ಮ ಪಿತಾಮಹರು, ದ್ರೋಣಾಚಾರ್ಯರು ಹಾಗೂ ಕರ್ಣನೂ ಮತ್ತು ಪ್ರಮುಖ ಯೋಧರ ಸಹಿತ ನಮ್ಮ ಪಕ್ಷದವ ಎಲ್ಲರೂ..
ನಿನ್ನ ವಿಕಾರ ಕೋರೆದಾಡೆಗಳ ಕಾರಣದಿಂದ ವಿಕರಾಳವಾದ ಭಯಂಕರ ಮುಖಗಳಲ್ಲಿ ಬಹು ವೇಗವಾಗಿ ಪ್ರವೇಶಿಸುತ್ತಿದ್ದಾರೆ. ಕೆಲವರಂತೂ, ಚೂರು-ಚೂರಾದ ತಲೆಗಳ ಸಹಿತ ನಿನ್ನ ಹಲ್ಲುಗಳ ಸಂದುಗಳಲ್ಲಿ ಸಿಕ್ಕಿಹಾಕಿಕೊಂಡಿರುವಂತೆ ಕಾಣುತ್ತಿದ್ದಾರೆ.

ಅರ್ಜುನ ಆಶ್ಚರ್ಯಚಕಿತನಾಗಿ ನಿಂತಿದ್ದಾನೆ. "ಭಗವಂತ! ನೀನು ಯಾರು? ನಾನು ತಿಳಿದ ಮಧುಸೂದನನು ಮಂದಸ್ಮಿತನು, ವೇಣುನಾದ ಮಾಡುತ್ತಾ ಸಿಹಿಯಾದ ಮಾತನಾಡುವ ಸುಂದರ ರೂಪವುಳ್ಳವನು. ಆದರೆ ಇಲ್ಲಿ ನಾನು ಏನನ್ನು ನೋಡುತ್ತಿದ್ದೇನೆ? ನೀನು ಯಾರೆಂದೇ ತಿಳಿಯದಾಗುತ್ತಿದೆ! ಧೃತರಾಷ್ಟ್ರ ಪುತ್ರರು, ಭೀಷ್ಮ, ದ್ರೋಣರಾದಿಯಾಗಿ ಇಲ್ಲಿ ನೆರೆದಿರುವ ಎಲ್ಲಾ ಯೋಧರು ನಿನ್ನ ಬಾಯಿಯೊಳಗೆ ನುಸುಳುತ್ತಿದ್ದಾರೆ. ಕೆಲವರಂತೂ ನಿನ್ನ ದವಡೆಗಳ ಮಧ್ಯೆ ಸಿಲುಕಿ ಪುಡಿಪುಡಿಯಾಗುತ್ತಿದ್ದಾರೆ. ನಿನ್ನ ಈ ರೂಪವು ಕಲ್ಪನೆಗೆ ಮೀರಿದ್ದಾಗಿದೆ. ಯಾರು ನೀನು?" ಎಂದು ತನ್ನ ಕೃಷ್ಣನನ್ನು ನೆನಪಿಸಿಕೊಂಡು ಪರಿತಪಿಸುತ್ತಿದ್ದಾನೆ. ಅರ್ಜುನನು ಕ್ಷತ್ರಿಯ ಧರ್ಮದ ತನ್ನ ಕರ್ತವ್ಯವನ್ನು ಮರೆತು ದುಃಖತಪ್ತನಾಗಿ ಶೋಕಿಸುತ್ತ ಕುಳಿತಾಗ ಭಗವಂತನು ತನ್ನ ವಿಶ್ವರೂಪವನ್ನು ತೋರಿಸುತ್ತಿದ್ದಾನೆ. ಅರ್ಜುನನು ಮೋಹಗ್ರಸ್ತನಾಗಿ ತನ್ನ ಮನಸ್ಸಿನ ಸಂತೋಷಕ್ಕೆ ತಕ್ಕಂತೆ ನಡೆದುಕೊಳ್ಳಲು ಯತ್ನಿಸುತ್ತಿದ್ದನು. ಭಗವಂತನಿಂದಲೂ ತನ್ನ ಮನಸ್ಸಿನ ಭಾವಕ್ಕೆ ತಕ್ಕ ಮಾತುಗಳನ್ನು ಬಯಸಿದ್ದನು. ಆದರೆ ಇಲ್ಲಿ ಭಗವಂತನು ಅರ್ಜುನನ ಮನಸ್ಸಿನಲ್ಲಿ ಕವಿದ ಮೋಹದ ಕಾರ್ಮೋಡವನ್ನೇ ಸರಿಸಿ ಅವನಿಗೆ ಜ್ಞಾನದೀಕ್ಷೆ ನೀಡುತ್ತಿದ್ದಾನೆ.

ಸಂತ ಕಬೀರರು ಹೇಳುತ್ತಾರೆ :

**ಝೂಟೇ ಸುಖ ಕೋ ಸುಖ ಕಹೇ, ಮಾನತ ಮನ ಮೋದ ।**
**ಸಲಕ ಚಬೈನಾ ಕಾಲ ಕಾ ಕುಛ ಮುಹ ಮೇ ಕುಛ ಗೋದ ॥**

ಮನಸ್ಸು ಮುದಗೊಳ್ಳುವಂತ ಸುಖವನ್ನೇ ನಾವು ಸುಖ ಎಂದು ನಂಬುತ್ತೇವೆ. ಮತ್ತು ಆ ಲೌಕಿಕ ಸುಖದಲ್ಲೇ ಬದುಕಲು ಯತ್ನಿಸುತ್ತೇವೆ. ಆದರೆ ಕಾಲನ (ಮೃತ್ಯುವಿನ) ದೃಷ್ಟಿಯಲ್ಲಿ ಇಡೀ ಜಗತ್ತು ಸ್ವಲ್ಪ ಬಾಯಲ್ಲಿ ಸ್ವಲ್ಪ ಮಡಿಲಲ್ಲಿ ಇರುವ ಊಟದಂತೆ ಅಷ್ಟೇ!!

**11.28, 11.29**

**ಯಥಾ ನದೀನಾಂ(ಮ್) ಬಹವೋಽಮ್ಬುವೇಗಾಃ(ಸ್),**
**ಸಮುದ್ರಮೇವಾಭಿಮುಖಾ ದ್ರವಂತಿ**
**ತಥಾ ತವಾಮೀ ನರಲೋಕವೀರಾ,**
**ವಿಶಂತಿ ವಕ್ತ್ರಾಣ್ಯಭಿವಿಜ್ವಲಂತಿ ॥28॥**
**ಯಥಾ ಪ್ರದೀಪ್ತಂ(ಙ್) ಜ್ವಲನಂ(ಮ್) ಪತಂಗಾ,**
**ವಿಶಂತಿ ನಾಶಾಯ ಸಮೃದ್ಧವೇಗಾಃ**

**ತಥೈವ ನಾಶಾಯ ವಿಶಂತಿ ಲೋಕಾಃ(ಸ್),**
**ತವಾಪಿ ವಕ್ತ್ರಾಣಿ ಸಮೃದ್ಧವೇಗಾಃ ॥29॥**

ಹೇಗೆ ನದಿಗಳ ಎಲ್ಲ ಜಲಪ್ರವಾಹಗಳು ಸಮುದ್ರಕ್ಕೆ ಅಭಿಮುಖವಾಗಿಯೇ ಓಡುತ್ತವೆಯೋ, ಅರ್ಥಾತ್ ಸಾಗರಕ್ಕೆ ಸೇರುತ್ತದೆಯೋ, ಹಾಗೆಯೇ ನರಲೋಕದ ಶ್ರೇಷ್ಠ ವೀರರು ಸಹ ಪ್ರಜ್ವಲಿಸುತ್ತಿರುವ ನಿನ್ನ ಮುಖಗಳಲ್ಲಿ ಪ್ರವೇಶಿಸುತ್ತಿದ್ದಾರೆ.
ಹೇಗೆ ಪತಂಗಗಳು ಮೋಹವಶದಿಂದ ನಾಶಹೊಂದುವುದಕ್ಕಾಗಿಯೇ ಪ್ರಜ್ವಲಿಸುವ ಅಗ್ನಿಯಲ್ಲಿ ಅತ್ಯಂತ ವೇಗದಿಂದ ಪ್ರವೇಶಿಸುತ್ತವೆಯೋ ಹಾಗೆಯೇ ಈ ಜನರೆಲ್ಲರೂ ಸಹ ತಮ್ಮ ನಾಶಕ್ಕಾಗಿಯೇ ನಿನ್ನ ಮುಖಗಳಲ್ಲಿ ಅತಿ ವೇಗವಾಗಿ ಪ್ರವೇಶಿಸುತ್ತಿದ್ದಾರೆ.

ಚಿಂತಾಕ್ರಾಂತನಾದ ಅರ್ಜುನನು ತಾನು ನೋಡುತ್ತಿರುವ ವಿಷಯಗಳನ್ನು ಇಲ್ಲಿ ಭಗವಂತನಿಗೆ ಹೇಳುತ್ತಿದ್ದಾನೆ.

ಹೇಗೆ ಎಲ್ಲಾ ನದಿಗಳು ಹರಿದು ಸ್ವಾಭಾವಿಕವಾಗಿ ಕೊನೆಯಲ್ಲಿ ಸಾಗರವನ್ನು ಸೇರುತ್ತದೆಯೋ ಹಾಗೇ ಈ ನರಲೋಕದ ಜೀವಿಗಳೆಲ್ಲ ನಿನ್ನನ್ನು ಪ್ರವೇಶ ಮಾಡುತ್ತಿದ್ದಾರೆ.

ಪತಂಗಗಳು ಅಗ್ನಿಯ ಜ್ವಾಲೆಯ ಮೋಹಕ್ಕೆ ಒಳಗಾಗಿ ತಾನು ಸುಟ್ಟುಹೋಗುತ್ತೇನೆ ಎಂದು ತಿಳಿದಿದ್ದರೂ ವೇಗವಾಗಿ ಹಾರಿ ಹೋಗಿ ಆ ಜ್ವಾಲೆಯಲ್ಲಿ ಬಿದ್ದು ನಾಶವಾಗುತ್ತವೆ. ಈ ಪತಂಗಗಳ ಹಾಗೇ ನರಲೋಕದ ಜೀವಿಗಳು ಕೂಡಾ ನಿನ್ನ ಮುಖದ ಕಡೆಗೆ ಧಾವಿಸಿ ಬಂದು ನಿನ್ನಲ್ಲಿ ಸೇರಿ ನಾಶವಾಗಿ ಹೋಗುತ್ತಿದ್ದಾರೆ.

ಎಂದು ಅರ್ಜುನನು ಹೇಳುತ್ತಾನೆ. ಈ ಸಂಗತಿಗಳು ಹೇಗೆ ನಡೆಯಲು ಸಾಧ್ಯ ಎಂಬುದೇ ಅರ್ಜುನನಿಗೆ ತಿಳಿಯದಾಗಿದೆ.

**11.30, 11.31**

**ಲೇಲಿಹ್ಯಸೇ ಗ್ರಸಮಾನಃ(ಸ್) ಸಮಂತಾಲ್,**
**ಲೋಕಾನ್ಸಮಗ್ರಾನ್ವದನೈರ್ಜ್ವಲದ್ಭಿಃ**
**ತೇಜೋಭಿರಾಪೂರ್ಯ ಜಗತ್ಸಮಗ್ರಂ(ಮ್),**
**ಭಾಸಸ್ತವೋಗ್ರಾಃ(ಫ್) ಪ್ರತಪಂತಿ ವಿಷ್ಣೋ ॥30॥**
**ಆಖ್ಯಾಹಿ ಮೇ ಕೋ ಭವಾನುಗ್ರರೂಪೋ,**
**ನಮೋಽಸ್ತು ತೇ ದೇವವರ ಪ್ರಸೀದ**
**ವಿಜ್ಞಾತುಮಿಚ್ಛಾಮಿ ಭವಂತಮಾದ್ಯಂ(ನ್),**
**ನ ಹಿ ಪ್ರಜಾನಾಮಿ ತವ ಪ್ರವೃತ್ತಿಮ್ ॥31॥**

ನೀನು, ಸಮಸ್ತ ಲೋಕಗಳನ್ನೂ ಪ್ರಜ್ವಲಿಸುವ ನಿನ್ನ ಮುಖಗಳಿಂದ ನುಂಗುತ್ತಾ ಎಲ್ಲ ಕಡೆಗಳಿಂದಲೂ ಚಪ್ಪರಿಸುತ್ತಿರುವೆ. ಹೇ ಪರಮಾತ್ಮನೆ! ನಿನ್ನ ಉಗ್ರವಾದ ಪ್ರಕಾಶವು ತೇಜಸ್ಸಿನಿಂದ ತುಂಬಿಕೊಂಡು ಇಡೀ ಜಗತ್ತನ್ನು ದಹಿಸುತ್ತಿದೆ.
ಉಗ್ರರೂಪಿಯಾದ ನೀನು ಯಾರೆಂದು ನನಗೆ ಹೇಳು, ಹೇ ದೇವಶ್ರೇಷ್ಠನೇ! ನಿನಗೆ ಇದೋ ನಮಸ್ಕಾರಗಳು. ಪ್ರಸನ್ನನಾಗು, ಆದಿ ಪುರುಷನಾದ ನಿನ್ನನ್ನು ಯಥಾರ್ಥವಾಗಿ ತಿಳಿದುಕೊಳ್ಳಲು ಇಚ್ಛಿಸುತ್ತೇನೆ. ಏಕೆಂದರೆ ನಿನ್ನ ಪ್ರವೃತ್ತಿಯನ್ನು ನಾನು ತಿಳಿಯೆನು.

ಕೊನೆಗೆ ಅರ್ಜುನನು ಭಗವಂತನಲ್ಲಿ ಪ್ರಸನ್ನನಾಗುವಂತೆ ಪ್ರಾರ್ಥಿಸುತ್ತಾನೆ.

ಮಹಾಕಾಲನಂತೆ ಸಮಸ್ತ ಲೋಕಗಳನ್ನು ನೀನು ನುಂಗುತ್ತಿರುವೆ. ಹೇ ವಿಷ್ಣುವೇ! ನಿನ್ನ ತೇಜಸ್ಸಿನ ಕಿರಣಗಳು ಸಮಸ್ತವಿಶ್ವವನ್ನು ಆವರಿಸಿ ಭೀಕರವಾಗಿ ಸುಡುತ್ತಿದೆ. ಈ ಉಗ್ರರೂಪಿಯಾದ ನೀನು ಯಾರು? ಹೇ ದೇವ ಶ್ರೇಷ್ಠನೇ! ನಿನಗೆ ಪ್ರಣಾಮಗಳು. ನೀನು ಪ್ರಸನ್ನನಾಗು! ಕೃಪೆಮಾಡು! ಆದಿಪುರುಷನಾದ ನಿನ್ನನ್ನು ವಿಶೇಷವಾಗಿ ತಿಳಿಯುವ

ಮನಸಾಗಿದೆ. ಅನುಗ್ರಹಿಸು! ನಿನ್ನ ಉದ್ದೇಶಗಳನ್ನು ತಿಳಿಯುವ ಸಾಮರ್ಥ್ಯ ಖಂಡಿತ ನನಗಿಲ್ಲ, ಅವೆಲ್ಲವನ್ನೂ ತಿಳಿಯಬಯಸುವೆನು. ಎಲ್ಲವನ್ನೂ ತಿಳಿಸು. ಕೃಪೆಮಾಡು!

ನಂತರ ಅರ್ಜುನನ ಮಾತುಗಳಿಂದ ಪ್ರಸನ್ನನಾದ ಭಗವಂತನು ತನ್ನ ಬಗ್ಗೆ ವಿವರಿಸಲು ಪ್ರಾರಂಭ ಮಾಡುತ್ತಾನೆ.

ಭಗವಂತನ ಮುಖವಾಣಿಗಳನ್ನು ಮುಂದಿನ ವಿವೇಚನೆಯಲ್ಲಿ ನೋಡೋಣ ಎಂದು ಹೇಳುತ್ತಾ, ಶಿವರಾತ್ರಿಯ ಪರ್ವಕಾಲವಾದದ್ದರಿಂದ ರುದ್ರಾಷ್ಟಕವನ್ನು ಪಠನೆ ಮಾಡುವ ಮೂಲಕ ಇಂದಿನ ಸತ್ರವನ್ನು ಮುಗಿಸಲಾಯಿತು.

ರುದ್ರಾಷ್ಟಕ : https://drive.google.com/file/d/1yGNUm4OOBWNtCJDvRiNWuL5LwIgd30vR/view?usp=drivesdk

ನಮಾಮೀಶಮೀಶಾನ ನಿರ್ವಾಣರೂಪಂ
ವಿಭುಂ ವ್ಯಾಪಕಂ ಬ್ರಹ್ಮವೇದಸ್ವರೂಪಮ್ |
ನಿಜಂ ನಿರ್ಗುಣಂ ನಿರ್ವಿಕಲ್ಪಂ ನಿರೀಹಂ
ಚಿದಾಕಾಶಮಾಕಾಶವಾಸಂ ಭಜೇಽಹಮ್ || ೧ ||

ನಿರಾಕಾರಮೋಂಕಾರಮೂಲಂ ತುರೀಯಂ
ಗಿರಾಜ್ಞಾನಗೋತೀತಮೀಶಂ ಗಿರೀಶಮ್ |
ಕರಾಲಂ ಮಹಾಕಾಲಕಾಲಂ ಕೃಪಾಲಂ
ಗುಣಾಗಾರಸಂಸಾರಪಾರಂ ನತೋಽಹಮ್ || ೨ ||

ತುಷಾರಾದ್ರಿಸಂಕಾಶಗೌರಂ ಗಭೀರಂ
ಮನೋಭೂತಕೋಟಿಪ್ರಭಾಶ್ರೀ ಶರೀರಮ್ |
ಸ್ಫುರನ್ಮೌಲಿಕಲ್ಲೋಲಿನೀ ಚಾರುಗಂಗಾ
ಲಸದ್ಭಾಲಬಾಲೇಂದು ಕಂಠೇ ಭುಜಂಗಾ || ೩ ||

ಚಲತ್ಕುಂಡಲಂ ಭ್ರೂಸುನೇತ್ರಂ ವಿಶಾಲಂ
ಪ್ರಸನ್ನಾನನಂ ನೀಲಕಂಠಂ ದಯಾಲುಮ್ |
ಮೃಗಾಧೀಶಚರ್ಮಾಂಬರಂ ಮುಂಡಮಾಲಂ
ಪ್ರಿಯಂ ಶಂಕರಂ ಸರ್ವನಾಥಂ ಭಜಾಮಿ || ೪ ||

ಪ್ರಚಂಡಂ ಪ್ರಕೃಷ್ಟಂ ಪ್ರಗಲ್ಭಂ ಪರೇಶಂ
ಅಖಂಡಂ ಅಜಂ ಭಾನುಕೋಟಿಪ್ರಕಾಶಮ್ |
ತ್ರಯಃಶೂಲನಿರ್ಮೂಲನಂ ಶೂಲಪಾಣಿಂ
ಭಜೇಽಹಂ ಭವಾನೀಪತಿಂ ಭಾವಗಮ್ಯಮ್ || ೫ ||

ಕಲಾತೀತಕಲ್ಯಾಣ ಕಲ್ಪಾಂತಕಾರೀ
ಸದಾ ಸಜ್ಜನಾನಂದದಾತಾ ಪುರಾರೀ |
ಚಿದಾನಂದಸಂದೋಹ ಮೋಹಾಪಹಾರೀ
ಪ್ರಸೀದ ಪ್ರಸೀದ ಪ್ರಭೋ ಮನ್ಮಥಾರೀ || ೬ ||

ನ ಯಾವದುಮಾನಾಥಪಾದಾರವಿಂದಂ
ಭಜಂತೀಹ ಲೋಕೇ ಪರೇ ವಾ ನರಾಣಾಮ್ |
ನ ತಾವತ್ಸುಖಂ ಶಾಂತಿ ಸಂತಾಪನಾಶಂ
ಪ್ರಸೀದ ಪ್ರಭೋ ಸರ್ವಭೂತಾಧಿವಾಸಮ್ || ೭ ||

ನ ಜಾನಾಮಿ ಯೋಗಂ ಜಪಂ ನೈವ ಪೂಜಾಂ

ನತೋಽಹಂ ಸದಾ ಸರ್ವದಾ ಶಂಭು ತುಭ್ಯಮ್ |
ಜರಾಜನ್ಮದುಃಖೌಘ ತಾತಪ್ಯಮಾನಂ
ಪ್ರಭೋ ಪಾಹಿ ಆಪನ್ನಮಾಮೀಶ ಶಂಭೋ || ೮ ||

ರುದ್ರಾಷ್ಟಕಮಿದಂ ಪ್ರೋಕ್ತಂ ವಿಪ್ರೇಣ ಹರತೋಷಯೇ |
ಯೇ ಪಠಂತಿ ನರಾ ಭಕ್ತ್ಯಾತೇಷಾಂ ಶಂಭುಃ ಪ್ರಸೀದತಿ ||

ಇತಿ ಶ್ರೀ ಗೋಸ್ವಾಮಿ ತುಲಸೀದಾಸ ಕೃತಂ ಶ್ರೀ ರುದ್ರಾಷ್ಟಕಂ ಸಂಪೂರ್ಣಮ್ |

**ಪ್ರಶ್ನೋತ್ತರಗಳು**

**ಪ್ರಶ್ನೆ ಮಾಡಿದವರು : ಬಜರಂಗ್ ಜೀ**

**ಪ್ರಶ್ನೆ :** ಸತ್ಯಯುಗ ಮತ್ತು ಕಲಿಯುಗ ಎರಡರಲ್ಲಿಯೂ ಒಳ್ಳೆಯದು ಮತ್ತು ಕೆಟ್ಟದ್ದು ಎರಡೂ ಇದ್ದವು. ಆದರೂ ಕಲಿಯುಗವನ್ನು ಮಾತ್ರ ಕೆಟ್ಟದ್ದು ಎಂದು ಹೇಳುತಾರ್ತೆ? ನಾಲ್ಕೂ ದಿಕ್ಕಿನಲ್ಲೂ ಕೆಟ್ಟದ್ದೇ ಇದೆ ಎಂದು ಕಲಿಯುಗದಲ್ಲಿ ಮಾತ್ರ ಯಾಕೆ ಹೇಳುತಾರ್ತೆ?

**ಉತ್ತರ :** ಸತ್ಯಯುಗದಲ್ಲಿ ಧರ್ಮದ ನಾಲ್ಕೂ ವಿಭಾಗಗಳಿದ್ದವು. ಸತ್ಯ ಧರ್ಮ, ದಾನ ಮತ್ತು ಶೌಚ ಈ ನಾಲ್ಕು ಸತ್ಯಯುಗದಲ್ಲಿ ಸಮವಾಗಿ ಇದ್ದವು. ಸತ್ಯ ಧರ್ಮವನ್ನು ಎಲ್ಲರೂ ಪಾಲಿಸುತ್ತಿದ್ದರು. ಕಲಿಯುಗದಲ್ಲಿ ಸತ್ಯ ಧರ್ಮ ಯಾವುದೂ ಇಲ್ಲ.

ತ್ರೇತಾಯುಗದ ನಂತರ ತಪಸ್ಸು ಕೂಡಾ ಇಲ್ಲದ್ದಾಯಿತು. ಹಲವರು ಒಂದೇ ಕಾಲಿನಲ್ಲಿ ನಿಂತು ತಪಸ್ಸು ಮಾಡಿದ್ದನ್ನು ನಾವು ಪುರಾಣಗಳಲ್ಲಿ ಕೇಳುತ್ತೇವೆ. ನಂತರ ದ್ವಾಪರ ಯುಗದ ಕೊನೆಯಲ್ಲಿ ಶೌಚವೂ ಮುಗಿದುಹೋಯಿತು. ಸ್ನಾನವನ್ನೇ ಮಾಡದಿರುವ ಜನರನ್ನು ಈ ಕಲಿಯುಗದಲ್ಲಿ ನೋಡುತ್ತೇವೆ ಮತ್ತು ಅದು ಈಗ ದೊಡ್ಡ ವಿಚಾರ ಕೂಡಾ ಅಲ್ಲ.

ಕಲಿಯುಗದಲ್ಲಿ ಈಗ ಉಳಿದಿರುವ ಧರ್ಮ ಒಂದೇ. ಅದುವೇ ದಾನ. ಸತ್ಯಯುಗದಲ್ಲಿ ನಡೆಯುತ್ತಿರುವ ಹಾಗೇ 'ದಾನ' ಮಾತ್ರ ಈ ಕಲಿಯುಗದಲ್ಲಿ ನಡೆಯುತದ್ತೆ.

ಸತ್ಯಯುಗದಲ್ಲಿ ನಾಲ್ಕು ಧರ್ಮಗಳ ಪಾಲನೆಯಿತ್ತು, ತ್ರೇತಾಯುಗದಲ್ಲಿ ಅದು ಮೂರಾಯಿತು. ದ್ವಾಪರದಲ್ಲಿ ಎರಡಾಗಿ ಕೊನೆಗೆ ಕಲಿಯುಗದಲ್ಲಿ ಕೇವಲ ಒಂದು ಬಗೆಯ ಧರ್ಮ ಮಾತ್ರ ಉಳಿಯಿತು. ಸತ್ಯ ಧರ್ಮ, ಶೌಚಗಳು ಇಲ್ಲದೇ ಇರುವುದರಿಂದ ಈ ಕಲಿಯುಗವನ್ನು 'ಘೋರ' ಎಂದು ಪರಿಗಣಿಸಲಾಗುತದ್ತೆ.

**ಪ್ರಶ್ನೆ ಮಾಡಿದವರು : ಸಂದೀಪ್ ಠಾಕುರ್ ಜೀ**

**ಪ್ರಶ್ನೆ** : ಕೇವಲ ' ಹರಿ ' ನಾಮಸ್ಮರಣೆ ಮಾಡಿದರೆ ಮಾತ್ರ ಮುಕ್ತಿ ಸಿಗುತದ್ತೆಯೇ? ಶಿವಭಕರ್ತಿಗೆ ಮುಕ್ತಿ ಹೇಗೆ ಲಭಿಸುತದ್ತೆ?

**ಉತ್ತರ** : ಈ ನಂಬಿಕೆಯೇ ತಪ್ಪು. ರಾಮ, ಕೃಷ್ಣ, ಶಿವ ಎಲ್ಲರೂ ಒಂದೇ. ಎಲ್ಲವೂ ಪರಮೇಶ್ವರ(ಭಗವಂತ)ನ ತತ್ವಗಳೇ. ಯಾರು ಯಾವ ರೂಪದಲ್ಲಿ ನನ್ನನ್ನು ಭಕ್ತಿಯಿಂದ ಭಜಿಸುತಾರ್ತೋ ಅದೇ ರೂಪದಲ್ಲಿ ಅವರನ್ನು ನಾನು ಅನುಗ್ರಹಿಸುತ್ತೇನೆ, ಎಂದು ಭಗವದ್ಗೀತೆಯಲ್ಲಿಯೇ ಭಗವಂತ ಹೇಳಿದ್ದಾನೆ. 'ಹರಿ' ಎನ್ನಿ, 'ಹರ' ಎನ್ನಿ, ಅವೆಲ್ಲದರ ಹಿಂದಿನ ಈಶ್ವರೀಯ ತತ್ವವು ಒಂದೇ ವಿನಃ ಬೇರೆ ಬೇರೆಯಲ್ಲ.

ಹೀಗೇ ಹಲವು ಪ್ರಶ್ನೋತ್ತರಗಳೊಂದಿಗೆ ಇಂದಿನ ಸತ್ರವು ಪರಿಸಮಾಪ್ತವಾಯಿತು.

ಅರ್ಥ ವ್ಯಾಖ್ಯಾನದ ನಮ್ಮ ಈ ರಚನೆ ನಿಮಗೆ ತೃಪ್ತಿ ನೀಡಿದೆ ಎಂದು ಭಾವಿಸುತ್ತೇವೆ. ದಯಮಾಡಿ ಈ ಕೆಳಗಿನ ಕೊಂಡಿ ಬಳಸಿ ನಿಮ್ಮ ಪ್ರತಿಕ್ರಿಯೆ ನೀಡಬೇಕೆಂದು ವಿನಂತಿ.

**https://vivechan.learngeeta.com/feedback/**

**ಈ ಸಾರಾಂಶವನ್ನು ಓದಿದ್ದಕ್ಕಾಗಿ ನಿಮಗೆ ಧನ್ಯವಾದಗಳು**

ಅರ್ಥ ವಿವೇಚನೆಯ ಈ ಬರಹವನ್ನು ನೀವು ಆನಂದಿಸಿರುವಿರೆಂದು ಭಾವಿಸುತ್ತೇವೆ. ಬರಹದಲ್ಲಿ ದೋಷಗಳು ನುಸುಳದಂತೆ ಸಾಧ್ಯವಾದಷ್ಟು ಮಟ್ಟಿಗೆ ಪ್ರಯತ್ನಿಸಿದ್ದೇವೆ. ಆದರೂ, ಸಣ್ಣಪುಟ್ಟ ತಪ್ಪುಗಳಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ. ಅವುಗಳನ್ನು ನಿರ್ಲಕ್ಷಿಸಿ ಸಹಕರಿಸಬೇಕೆಂದು ವಿನಂತಿ.

---

**ಜೈ ಶ್ರೀಕೃಷ್ಣ!**

ಸಂಕಲನ : ಗೀತಾ ಪರಿವಾರದ ಸೃಜನಾತ್ಮಕ ಬರವಣಿಗೆಯ ತಂಡ

---

**ಪ್ರತಿ ಮನೆಯಲ್ಲಿ ಗೀತೆ, ಪ್ರತಿ ಕರದಲ್ಲಿ ಗೀತೆ !**

ಗೀತಾ ಪರಿವಾರದ ಧ್ಯೇಯವನ್ನು ಪಸರಿಸಲು ನಾವೆಲ್ಲಾ ಒಂದಾಗೋಣ. ನಮ್ಮ ಬಂಧು-ಮಿತ್ರರಿಗೆ ಗೀತಾ ತರಗತಿಗಳ ಉಡುಗೊರೆಯನ್ನು ನೀಡೋಣ.

**https://gift.learngeeta.com/**

---

ಗೀತಾ ಪರಿವಾರ ಹೊಸ ಕ್ರಮ ಕೈಗೊಂಡಿದೆ. ಈ ಹಿಂದಿನ ಎಲ್ಲ ಅರ್ಥ ವಿವೇಚನೆಗಳ ಯೂಟ್ಯೂಬ್ ವೀಡಿಯೋಗಳನ್ನು ವೀಕ್ಷಿಸಬಹುದು ಹಾಗು ಪಿಡಿಎಫ್ ಆವೃತ್ತಿಯ ಬರಹಗಳನ್ನು ಓದಬಹುದು. ಇದಕ್ಕಾಗಿ ಕೆಳಗಾಣಿಸಿದ ಲಿಂಕ್ ಬಳಸಿರಿ.

**https://vivechan.learngeeta.com/**

---

**ಗೀತೆ ಕಲಿಯಿರಿ, ಗೀತೆ ಹರಡಿರಿ, ಗೀತೆ ಜೀವಿಸಿರಿ**

**|| ಓಂ ಶ್ರೀ ಕೃಷ್ಣಾರ್ಪಣಮಸ್ತು ||**